# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:04.07.2025

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007**

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/763/2025-26/**1486 **ದಿನಾಂಕ:11.07.2025**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:04.07.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ - III ರ ಪ್ರಕರಣ 16 (i) ರ ರೀತ್ಯ ದಿನಾಂಕ:04.07.2025 ರಂದು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ. ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ದಿನಾಂಕ:04.07.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

<u>ಸಭೆಯಲ್ಲಿ ಹಾಜರಿದ್ದ ಸದಸ್ಯರು:</u>

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಪ್ರೊ. ಶಶಿಧರ ಆರ್. ಡೀನರು, ವಾಣಿಜ್ಯ ನಿಕಾಯ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಉಮೇಶ್ ಬಿ. ಎನ್., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಡಾ. ಕೆ.ಟಿ. ನಾಗರಾಜ ನಾಯ್ಕ., ಪ್ರಾಚಾರ್ಯರು : ಸದಸ್ಯರು
6. ಡಾ. ಬಾಬು ಕುಮಾರ್ ಓ., ಪ್ರಾಚಾರ್ಯರು : ಸದಸ್ಯರು
7. ಡಾ. ಗಿರೀಶ್ ಟಿ., ಪ್ರಾಚಾರ್ಯರು : ಸದಸ್ಯರು
8. ಶ್ರೀಮತಿ ಉಷಾ ಎಸ್., ಆರ್, ಪ್ರಾಚಾರ್ಯರು : ಸದಸ್ಯರು
9. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
10. ಡಾ. ಜಿ. ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಪ್ರೊ. ರವಿಕುಮಾರ್ ಪಾಟೀಲ್ ಹೆಚ್.ಎಸ್., ಪ್ರಾಧ್ಯಾಪಕರು : ಸದಸ್ಯರು
13. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
14. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು, (ಆಡಳಿತ) : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 14 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು ಹಾಗೂ ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರಾದ ಶ್ರೀ ಬಸವರಾಜ್ ಪಿ. ಗಾಣಿಗೇರ್, ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಅಕಾಲಿಕ ಮರಣ ಹೊಂದಿದ್ದರಿಂದ ಮೌನಾಚರಣೆ ಮೂಲಕ ಸದರಿಯವರಿಗೆ ಸಂತಾಪವನ್ನು ಸೂಚಿಸಲಾಯಿತು ಹಾಗೂ **ಹಂಗೇರಿ ದೇಶದ ಮಿಸ್ಕಾಕ್ ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಇನ್ಫಾರ್ಮೆಟಿಕ್ಸ್** ನಿಕಾಯದ ವತಿಯಿಂದ **ಪ್ರೊ. ಬಿ.ಡಿ. ಕುಂಬಾರ ಮಾನ್ಯ ಕುಲಪತಿಗಳು,** ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಹಾಗೂ **ಪ್ರೊ. ಮಹಾಬಲೇಶ್ವರ ಯು.ಎಸ್. ಪ್ರಾಧ್ಯಾಪಕರು,** ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಪ್ರಾಧ್ಯಾಪಕ ಪದವಿಯನ್ನು ನೀಡಿ ಗೌರವಿಸಿರುವುದಕ್ಕೆ ಸಭೆಯು ಹರ್ಷ ವ್ಯಕ್ತಪಡಿಸಿ ಮಾನ್ಯ ಕುಲಪತಿಗಳನ್ನು ಸನ್ಮಾನಿಸಲಾಯಿತು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(07/25) |

## –:ಟಿಪ್ಪಣಿ:–

**ವಿಷಯ: ದಿನಾಂಕ:13.05.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:13.05.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:20.05.2025 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:04.07.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:13.05.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಕುರಿತು ಕ್ರಮವಹಿಸಿರುವುದರ ಸಂಪೂರ್ಣ (Action Taken Report) ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ಮುಂದುವರೆದು, ಸದರಿ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

## –ಃಟಿಪ್ಪಣಿಃ–

ವಿಷಯಃ ಪ್ರೊ॥ ಬಿ.ಪಿ. ವೀರಭದ್ರಪ್ಪ, ನಿಕಟಪೂರ್ವ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಇವರ ವಯೋ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿದಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆಃ ಇಡಿ 17 ಯುಎಸ್‌ವಿ 2022, ದಿನಾಂಕಃ 07.08.2023.
2. ಸರ್ಕಾರದ ಪತ್ರ ಸಂಖ್ಯೆಃ ಇಡಿ 07 ಯುಎಸ್‌ವಿ 2025, ದಿನಾಂಕಃ 03.05.2025
3. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ10.06.2025

*****

ಸರ್ಕಾರದ ಉಲ್ಲೇಖ (1)ರ ಪತ್ರದಲ್ಲಿ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಕಛೇರಿಯ ಅರೆ ಸರ್ಕಾರಿ ಪತ್ರ ಸಂಖ್ಯೆಃ ಜಿಎಸ್/ಎಸ್‌ಪಿಎಲ್.ಎಸ್‌ಇಸಿವೈ/74/2023, ದಿನಾಂಕಃ 31.07.2023ರನ್ವಯ ಪ್ರೊ॥ ಬಿ.ಪಿ. ವೀರಭದ್ರಪ್ಪ, ನಿಕಟ ಪೂರ್ವ ಕುಲಪತಿಗಳು ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಕ್ರಮಗಳು ಅಂತಿಮವಾಗುವವರೆಗೂ ಸದರಿಯವರ ವಯೋನಿವೃತ್ತಿ ಸೌಲಭ್ಯಗಳನ್ನು ತಕ್ಷಣದಿಂದ ತಡೆಹಿಡಿಯುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 1958ರ ನಿಯಮ 214 (1) (ಎ) ಪ್ರಕಾರ ವಯೋನಿವೃತ್ತಿ ಸೌಲಭ್ಯಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಡೆಹಿಡಿಯಲು ತಿಳಿಸಿರುತ್ತಾರೆ. ಮುಂದುವರೆದು ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ಪ್ರೊ॥ ಬಿ.ಪಿ. ವೀರಭದ್ರಪ್ಪ, ನಿಕಟಪೂರ್ವ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಇವರ ವಿರುದ್ಧದ ಪ್ರಕರಣವು ಇನ್ನು ತನಿಖಾ ಹಂತದಲ್ಲಿರುವುದರಿಂದ, ತನಿಖಾ ಸಮಿತಿಯ ವರದಿ ಮೇಲೆ ವಿಚಾರಣೆ ನಡೆಸುವ ಪ್ರಕ್ರಿಯೆಯು ಇನ್ನು ಬಾಕಿ ಇದ್ದು, ಸದರಿಯವರ ವಯೋ ನಿವೃತ್ತಿ ಸೌಲಭ್ಯಗಳನ್ನು ಕೆ.ಸಿ.ಎಸ್.ಆರ್. ನಿಯಮಗಳು 1958ರ ನಿಯಮ 214(4) ರನ್ವಯ ತಾತ್ಕಾಲಿಕ ಪಿಂಚಣಿ ಮಂಜೂರು ಮಾಡಲು ಕ್ರಮಕೈಗೊಳ್ಳುವಂತೆ ತಿಳಿಸಿರುತ್ತಾರೆ. ಈ ಕುರಿತು ಉಲ್ಲೇಖ (3)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ04.07.2025ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

### :: ನಿರ್ಣಯ ::

ಪ್ರೊ॥ ಬಿ.ಪಿ. ವೀರಭದ್ರಪ್ಪ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ನಿಕಟಪೂರ್ವ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಇವರ ವಿರುದ್ಧದ ಪ್ರಕರಣವು ಇನ್ನು ತನಿಖಾ ಹಂತದಲ್ಲಿರುವುದರಿಂದ, ತನಿಖಾ ಸಮಿತಿಯ ವರದಿ ಮೇಲೆ ವಿಚಾರಣೆ ನಡೆಸುವ ಪ್ರಕ್ರಿಯೆಯು ಇನ್ನು ಬಾಕಿ ಇರುವುದರಿಂದ ವಯೋನಿವೃತ್ತಿ ಸೌಲಭ್ಯಗಳನ್ನು ಹೊರತುಪಡಿಸಿ (ಆರ್ಥಿಕ ಸೌಲಭ್ಯ) ಕೆ.ಸಿ.ಎಸ್.ಆರ್. ನಿಯಮಗಳು 1958ರ ನಿಯಮ 214(4) ರನ್ವಯ ತಾತ್ಕಾಲಿಕವಾಗಿ ಪಿಂಚಣಿ ಮಂಜೂರು ಮಾಡಲು ಉಲ್ಲೇಖ (2) ರ ಸರ್ಕಾರದ ಪತ್ರದನುಸಾರ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು ಹಾಗೂ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(07/25) |

**–ಃಟಿಪ್ಪಣಿಃ–**

ವಿಷಯಃ **ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು – ಇವರಿಗೆ Ocean University, China ದೇಶಕ್ಕೆ ಹೋಗಿ ಬರಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಬಗ್ಗೆ.**

ಉಲ್ಲೇಖ:
1. ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಇಂಜನಿಯರಿಂಗ್ ಕಾಲೇಜು, Ocean University, China ಇವರ ಪತ್ರ ದಿನಾಂಕಃ 28.04.2025
2. ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿ/ ಆತ/2025–26, ದಿನಾಂಕಃ 02.06.2025
3. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ06.06.2025

*****

ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಇಂಜನಿಯರಿಂಗ್ ಕಾಲೇಜು, Ocean University, China ಇವರು ಉಲ್ಲೇಖ (1)ರ ಪತ್ರದಲ್ಲಿ ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಿವಿ – ಇವರನ್ನು ದಿನಾಂಕಃ06.09.2025 ರಿಂದ 22.09.2025 ರವರೆಗೆ ತಮ್ಮ ವಿಶ್ವವಿದ್ಯಾನಿಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಭೇಟಿ ನೀಡುವಂತೆ ಆಹ್ವಾನಿಸಿರುತ್ತಾರೆ. ಮುಂದುವರೆದು ಉಲ್ಲೇಖ (2)ರ ಪತ್ರದಲ್ಲಿ ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು ಇವರು ಸದರಿ ವಿಶ್ವವಿದ್ಯಾನಿಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಮೇಲ್ಕಂಡ ದಿನಾಂಕದಂದು ಭೇಟಿ ನೀಡಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (3)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ04.07.2025ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು – ದಿನಾಂಕಃ06.09.2025 ರಿಂದ 22.09.2025 ರವರೆಗೆ – **ಆಹಾರ ವಿಜ್ಞಾನ ಮತ್ತು ಇಂಜನಿಯರಿಂಗ್ ಕಾಲೇಜು, Ocean University, China** ದೇಶಕ್ಕೆ – ಸಂದರ್ಶಕ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(07/25) |

**–:ಟಿಪ್ಪಣಿ:–**

ವಿಷಯ: **ಪ್ರೊ॥ ಜಿ.ಕೆ. ನಾಗರಾಜ, ಪ್ರಾಧ್ಯಾಪಕರು (ನಿಯೋಜನೆ), ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ – ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಕುರಿತು.**

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 345 ಯುಎನ್ಇ 2020, ದಿನಾಂಕ: 08.07.2021
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 345 ಯುಎನ್ಇ 2020, ದಿನಾಂಕ: 04.06.2025.
3. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ದಾವಿವಿ/ ಮಾಸನಿ/02/2025–26/994, ದಿನಾಂಕ: 09.06.2025

*****

ಸರ್ಕಾರದ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಪ್ರೊ॥ ಜಿ.ಕೆ. ನಾಗರಾಜ, ಪ್ರಾಧ್ಯಾಪಕರು, ರಸಾಯನಾಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಹುದ್ದೆ ರಹಿತವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಿಯೋಜನೆ ಮೇರೆಗೆ ವರ್ಗಾಯಿಸಿ ಆದೇಶಿಸಿರುತ್ತಾರೆ. ಮುಂದುವರೆದು, ಉಲ್ಲೇಖ (2)ರಲ್ಲಿ ದಿನಾಂಕ:08.07.2021ರಂದು ನೀಡಿರುವ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಪ್ರೊ॥ ಜಿ.ಕೆ. ನಾಗರಾಜ, ಪ್ರಾಧ್ಯಾಪಕರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕೂಡಲೇ ಕಾರ್ಯ ವರದಿ ಮಾಡಿಕೊಳ್ಳಲು ಆದೇಶಿಸಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ದಿನಾಂಕ:09.06.2025ರ ಪೂರ್ವಾಹ್ನ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಕ್ಕೆ ದಿನಾಂಕ:04.07.2025 ರಂದು ನಡೆಯುವ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ಮಂಗಳೂರು ವಿಶ್ವವಿದ್ಯಾನಿಲಯದಿಂದ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮೇರೆಗೆ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಹುದ್ದೆ ರಹಿತವಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ॥ ಜಿ.ಕೆ. ನಾಗರಾಜ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರನ್ನು ಸರ್ಕಾರದ ಆದೇಶಾನುಸಾರ ದಾವಣಗೆರೆ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(07/25) |

**–ಃಟಿಪ್ಪಣಿಃ–**

**ವಿಷಯಃ ದಿ. ಶ್ರೀ ಬಸವರಾಜ ಪಿ. ಗಾಣಿಗೇರ, ಸಹಾಯಕ ಕುಲಸಚಿವರು, ಇವರಿಗೆ ಲಭ್ಯವಿರುವ ಆರ್ಥಿಕ ಸೌಲಭ್ಯ/ ಗಳಿಕೆ ರಜೆಯ (Earned Leave Encashment) ನಗದೀಕರಣ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.06.2025

*****

ಶ್ರೀ ಬಸವರಾಜ್ ಪಿ. ಗಾಣಿಗೇರ, ಸಹಾಯಕ ಕುಲಸಚಿವರು – ಇವರು ದಿನಾಂಕ:01.06.2025 ರಂದು ಮರಣ ಹೊಂದಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ನಿಯಮಾನುಸಾರ ನೀಡಬೇಕಾದ ಆರ್ಥಿಕ ಸೌಲಭ್ಯ/ ಗಳಿಕೆ ರಜೆ (Earned Leave Encashment) ನಗದೀಕರಣ ಸೌಲಭ್ಯಗಳನ್ನು ಮಂಜೂರು ಮಾಡಿ ಸಂಬಂಧಿಸಿದವರಿಗೆ ಪಾವತಿಸುವ ಕುರಿತು ದಿನಾಂಕಃ04.07.2025 ರಂದು ನಡೆಯುವ ಸಿಂಡಿಕೇಟ್ ಸಭೆಯ ಅವಗಾಹನಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಶ್ರೀ ದಿ॥ ಬಸವರಾಜ್ ಪಿ. ಗಾಣಿಗೇರ, ಸಹಾಯಕ ಕುಲಸಚಿವರು – ಇವರು ದಿನಾಂಕ:01.06.2025 ರಂದು ಅಕಾಲಿಕ ಮರಣ ಹೊಂದಿರುವುದರಿಂದ ಸದರಿಯವರಿಗೆ ಕೆ.ಸಿ.ಎಸ್. ನಿಯಮಾನುಸಾರ ನೀಡಬೇಕಾದ ಆರ್ಥಿಕ ಸೌಲಭ್ಯ/ ಗಳಿಕೆ ರಜೆ (Earned Leave Encashment) ನಗದೀಕರಣ ಸೌಲಭ್ಯಗಳನ್ನು ಮಂಜೂರು ಮಾಡಿ ಸಂಬಂಧಿಸಿದವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು                                        ಕುಲಪತಿಗಳು

| ಮಾ.ಸ.ನಿ. ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(07/25) |

## –:ಟಿಪ್ಪಣಿ:–

ವಿಷಯ: **ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು – ಇವರು – Leadership Development Program for State Public Universities to the UK ನಲ್ಲಿ ಭಾಗವಹಿಸುವ ಕುರಿತು**

ಉಲ್ಲೇಖ: ಪ್ರೊ. ಎಸ್.ಆರ್. ನಿರಂಜನ, ಉಪಾಧ್ಯಕ್ಷರು, ಕ.ರಾ.ಉ.ಶಿ.ಪ, ಬೆಂಗಳೂರು ಇವರ ಪತ್ರ ಸಂಖ್ಯೆ: KSHEC/VCP-LDP/6/2025, Dated:20.06.2025.

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರು ರಾಜ್ಯದ ಆಯ್ದ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ನಾಯಕತ್ವ ಅಭಿವೃದ್ಧಿ (Leadership Development Program for State Public Universities to UK) ಕಾರ್ಯಕ್ರಮವನ್ನು ಮುಂಬರುವ ಸೆಪ್ಟಂಬರ್ 8 ರಿಂದ 18 ಒಟ್ಟು 11 (ಹನ್ನೊಂದು) ದಿನಗಳವರೆಗೆ ಆಯೋಜಿಸಿರುತ್ತಾರೆ. ಈ ಕಾರ್ಯಕ್ರಮದ ಮೂಲ ಉದ್ದೇಶ – ರಾಜ್ಯದ ವಿಶ್ವವಿದ್ಯಾನಿಲಯಗಳು, ಸಾರ್ವಜನಿಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆಯ್ದ ಸಂಶೋಧನಾ ಕ್ಷೇತ್ರಗಳಲ್ಲಿ ಪ್ರಯೋಜನಕಾರಿಯಾಗಿ ಕೆಲಸ ಮಾಡುವ ಸಹಯೋಗವನ್ನು ಹೊಂದಲು ನಮ್ಮ ರಾಜ್ಯದ ವತಿಯಿಂದ ಈ ನಿಯೋಗವನ್ನು ನಿಯೋಜಿಸಲಾಗಿದೆ.

ಆದ್ದರಿಂದ, 8th to 18th, ಸೆಪ್ಟಂಬರ್–2025 ರ (Leadership Development Program for State Public Universities to UK) ನಿಯೋಗದಲ್ಲಿ ಭಾಗವಹಿಸಲು ಪ್ರಯಾಣ, ವಸತಿ, ವೀಸಾ ಸೇರಿದಂತೆ ಕುಲಪತಿಗಳಿಗೆ 11 (ಹನ್ನೊಂದು) ದಿನಗಳ ಅವಧಿಗೆ ನಿಯೋಗದ ಅಂದಾಜು ವೆಚ್ಚ ರೂ. 5 ಲಕ್ಷ ರೂಪಾಯಿಗಳಾಗಿರುತ್ತದೆ ಮತ್ತು ಪ್ರಯಾಣ ವಿಮೆಯನ್ನು ಆಯಾ ವಿಶ್ವವಿದ್ಯಾಲಯಗಳು ಭರಿಸಬೇಕಾಗುತ್ತದೆ ಎಂದು ಉಲ್ಲೇಖಿತ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪತ್ರದಲ್ಲಿ ತಿಳಿಸಲಾಗಿದೆ. ತತ್ಸಂಬಂಧ ಸದರಿ ವಿಷಯವನ್ನು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

### :: ನಿರ್ಣಯ ::

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರ ಆದೇಶದಂತೆ Leadership Development Program for State Public Universities to UK ನಿಯೋಗದಲ್ಲಿ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಬಿ.ಡಿ. ಕುಂಬಾರ ಇವರು ದಿನಾಂಕ:08.09.2025 ರಿಂದ 18.09.2025 ರ ವರೆಗೆ ಭಾಗವಹಿಸಲು ಪ್ರಯಾಣ, ವಸತಿ, ವೀಸಾ ಸೇರಿದಂತೆ ಕುಲಪತಿಗಳಿಗೆ 11 (ಹನ್ನೊಂದು) ದಿನಗಳ ಅವಧಿಗೆ ನಿಯೋಗದ ಅಂದಾಜು ವೆಚ್ಚ ರೂ.5.00 ಲಕ್ಷ ರೂಪಾಯಿಗಳನ್ನು ಹಾಗೂ ಪ್ರಯಾಣ ವಿಮೆಯನ್ನು ವಿಶ್ವವಿದ್ಯಾನಿಲಯದಿಂದ ಭರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಮಾ.ಸ.ನಿ. ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.02(f)/(07/25) |

## –:ಟಿಪ್ಪಣಿ:–

ವಿಷಯ: **ನೋಡಲ್ ಅಧಿಕಾರಿಗಳು, ಅಂತರಾಷ್ಟ್ರೀಯ ಕೋಶ (International Cell) ಇವರು – Leadership Development Program for State Public Universities to the UK ನಲ್ಲಿ ಭಾಗವಹಿಸುವ ಕುರಿತು.**

ಉಲ್ಲೇಖ: ಪ್ರೊ. ಎಸ್.ಆರ್. ನಿರಂಜನ, ಉಪಾಧ್ಯಕ್ಷರು, ಕ.ರಾ.ಉ.ಶಿ.ಪ, ಬೆಂಗಳೂರು ಇವರ ಪತ್ರ ಸಂಖ್ಯೆ: KSHEC/VCP-LDP/ 6/2025, Dated:20.06.2025.

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರು ರಾಜ್ಯದ ಆಯ್ದ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಜೊತೆಯಲ್ಲಿ ನೋಡಲ್ ಅಧಿಕಾರಿಗಳು, ಅಂತರಾಷ್ಟ್ರೀಯ ಕಾರ್ಯಯೋಜನಾ ಘಟಕ (International Cell) ಇವರುಗಳಿಗೂ ಸಹ ನಾಯಕತ್ವ ಅಭಿವೃದ್ಧಿ (Leadership Development Program for State Public Universities to UK) ಕಾರ್ಯಕ್ರಮವನ್ನು ಮುಂಬರುವ ಸೆಪ್ಟಂಬರ್ 8 ರಿಂದ 18 ರವರೆಗೆ ಆಯೋಜಿಸಿರುತ್ತಾರೆ. ಈ ಕಾರ್ಯಕ್ರಮದ ಮೂಲ ಉದ್ದೇಶ – ರಾಜ್ಯದ ವಿಶ್ವವಿದ್ಯಾನಿಲಯಗಳು, ಸಾರ್ವಜನಿಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆಯ್ದ ಸಂಶೋಧನಾ ಕ್ಷೇತ್ರಗಳಲ್ಲಿ ಪ್ರಯೋಜನಕಾರಿಯಾಗಿ ಕೆಲಸ ಮಾಡುವ ಸಹಯೋಗವನ್ನು ಹೊಂದಲು ಈ ಕಾರ್ಯಕ್ರಮವನ್ನು ಆಯೋಜಿಸಿದೆ.

ಆದ್ದರಿಂದ, ನಮ್ಮ ವಿಶ್ವವಿದ್ಯಾನಿಲಯದ ಅಂತರರಾಷ್ಟ್ರೀಯ (International Cell) ಘಟಕದ ನೋಡಲ್ ಅಧಿಕಾರಿಗಳಿಗೆ $8^{th}$ to $18^{th}$ ಸೆಪ್ಟಂಬರ್–2025 ರ (Leadership Development Program for State Public Universities to UK) ಈ ನಿಯೋಗದಲ್ಲಿ ಭಾಗವಹಿಸಲು ಪ್ರಯಾಣ, ವಸತಿ, ವೀಸಾ ಸೇರಿದಂತೆ ಒಟ್ಟು 11 (ಹನ್ನೊಂದು) ದಿನಗಳ ಅವಧಿಗೆ ನಿಯೋಗದ ವೆಚ್ಚ ಅಂದಾಜು ಪ್ರತಿಯೊಬ್ಬರಿಗೆ 5 ಲಕ್ಷ ರೂಪಾಯಿಗಳಾಗಿರುತ್ತದೆ ಮತ್ತು ಪ್ರಯಾಣ ವಿಮೆಯನ್ನು ಆಯಾ ವಿಶ್ವವಿದ್ಯಾಲಯಗಳು ಭರಿಸಬೇಕಾಗುತ್ತದೆ. ತತ್ಸಂಬಂಧ ಸದರಿ ವಿಷಯವನ್ನು ದಿನಾಂಕ:04.07.2025ರಂದು ಆಯೋಜಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

:: **ನಿರ್ಣಯ** ::

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರ ಆದೇಶದಂತೆ Leadership Development Program for State Public Universities to UK ನಿಯೋಗದಲ್ಲಿ ವಿಶ್ವವಿದ್ಯಾನಿಲಯದ ಅಂತರರಾಷ್ಟ್ರೀಯ (International Cell) ಘಟಕದ ನೋಡಲ್ ಅಧಿಕಾರಿಗಳಾದ ಪ್ರೊ. ಪ್ರಮೋದ್ ಎಸ್.ಎನ್. ಪ್ರಾಧ್ಯಾಪಕರು, ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ದಿನಾಂಕ:08.09.2025 ರಿಂದ 18.09.2025 ರ ವರೆಗೆ ಭಾಗವಹಿಸಲು ಪ್ರಯಾಣ, ವಸತಿ, ವೀಸಾ ಸೇರಿದಂತೆ ಸದರಿಯವರಿಗೆ 11 (ಹನ್ನೊಂದು) ದಿನಗಳ ಅವಧಿಗೆ ನಿಯೋಗದ ಅಂದಾಜು ವೆಚ್ಚ ರೂ.5.00 ಲಕ್ಷ ರೂಪಾಯಿಗಳನ್ನು ಹಾಗೂ ಪ್ರಯಾಣ ವಿಮೆಯನ್ನು ವಿಶ್ವವಿದ್ಯಾನಿಲಯದಿಂದ ಭರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಮಾ.ಸ.ನಿ. ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.02(g)/(07/25) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಖಾಯಂ ಅಧ್ಯಾಪಕೇತರ ನೌಕರರ ಪರಿವೀಕ್ಷಣಾವಧಿ (**Probationary Period**) ಘೋಷಣೆ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:02.07.2025

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:19.02.2022ರ ಅಧಿಸೂಚನೆಯನ್ವಯ ನೇಮಕಗೊಂಡ ಒಟ್ಟು 10 (ಸಹಾಯಕ ಕುಲಸಚಿವ–02, ಅಧೀಕ್ಷಕ–02 ಹಾಗೂ ಪ್ರಥಮ ದರ್ಜೆ ಸಹಾಯಕ–06) ಅಧ್ಯಾಪಕೇತರ ನೌಕರರು ನಿಗದಿ ಪಡಿಸಿದ ಇಲಾಖೆ ಪರೀಕ್ಷೆಗಳನ್ನು ದಿನಾಂಕ:09.12.2024ರಂದು ಉತ್ತೀರ್ಣಗೊಂಡು, ಎರಡು ವರ್ಷಗಳ ಅವಧಿಯನ್ನು ಪೂರೈಸಿರುವುದರಿಂದ ಕೆ.ಸಿ.ಎಸ್. ನಿಯಮ 5(1) (ಎ) ರನ್ವಯ ಪರಿವೀಕ್ಷಣಾವಧಿ (Probationary Period) ಘೋಷಣೆ ಮಾಡುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗೆ ಹಾಗೂ ಅನುಕಂಪದ ಆಧಾರದ ಮೇರೆಗೆ ನೇಮಕಗೊಂಡ ಎರಡು ಅಧ್ಯಾಪಕೇತರ ನೌಕರರುಗಳಿಗೆ (ಕ್ರ.ಸಂ.11 ಮತ್ತು 12) ಈಗಾಗಲೇ ಪರಿವೀಕ್ಷಣಾ ಅವಧಿ ಘೋಷಣೆ ಮಾಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಸಂಬಂಧ ದಿನಾಂಕ:04.07.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**–:ವಿವರಗಳು ಕೆಳಗಿನಂತಿದೆ:–**

| ಕ್ರ ಸಂ. | ಹೆಸರು (ಶ್ರೀ/ಶ್ರೀಮತಿ/ಡಾ/ಕು.) | ಹುದ್ದೆ | ನೇಮಕಾತಿ ದಿನಾಂಕ | ಎರಡು ವರ್ಷಗಳು ಪೂರೈಸಿದ ದಿನಾಂಕ | ಷರಾ |
|---|---|---|---|---|---|
| 1 | ವಿನಯ್ ಕೆ.ಜಿ. | ಸಹಾಯಕ ಕುಲಸಚಿವ | 19.06.2023 | 18.06.2025 | |
| 2 | ಪ್ರಕಾಶ | ಸಹಾಯಕ ಕುಲಸಚಿವ | 19.06.2023 | 18.06.2025 | |
| 3 | ವಿನಯ್ ಡಿ. | ಅಧೀಕ್ಷಕ | 19.06.2023 | 18.06.2025 | |
| 4 | ಮಂಜುನಾಥ ಪಿ. | ಅಧೀಕ್ಷಕ | 27.06.2023 | 26.06.2025 | |
| 5 | ಪುನಿತ್ ಜೆ | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 6 | ಶ್ವೇತ ಎಸ್.ಆರ್. | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 7 | ರಾಜೇಶ್ವರಿ ಕುಲ್ಕರ್ಣಿ | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 8 | ರಘು ಬಿ. | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 9 | ರಾಜಶೇಖರ್ ಎಂ.ಪಿ. | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 10 | ಕಾರ್ತಿಕ್ ಎಂ. | ಪ್ರಥಮ ದರ್ಜೆ ಸಹಾಯಕ | 19.06.2023 | 18.06.2025 | |
| 11 | ಪೂರ್ಣರಾಘವೇಂದ್ರ ಎಂ.ವಿ. | ಪ್ರಥಮ ದರ್ಜೆ ಸಹಾಯಕ | 25.02.2022 | 24.02.2024 | ಘಟನೋತ್ತರ ಅನುಮತಿ |
| 12 | ಡಾ. ನವೀನ್‌ಕುಮಾರ್ ಕೆ.ಜೆ. | ಪ್ರಥಮ ದರ್ಜೆ ಸಹಾಯಕ | 25.02.2022 | 24.02.2024 | ಘಟನೋತ್ತರ ಅನುಮತಿ |

**:: ನಿರ್ಣಯ ::**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:19.02.2022ರ ಅಧಿಸೂಚನೆಯನ್ವಯ ನೇಮಕಗೊಂಡ ಕ್ರ.ಸಂ. 1 ರಿಂದ 10 ರ ವರೆಗಿನ (ಸಹಾಯಕ ಕುಲಸಚಿವ–02, ಅಧೀಕ್ಷಕ–02 ಹಾಗೂ ಪ್ರಥಮ ದರ್ಜೆ ಸಹಾಯಕ–06) ಅಧ್ಯಾಪಕೇತರ ನೌಕರರು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ದಿನಾಂಕ:09.12.2024ರಂದು ಉತ್ತೀರ್ಣಗೊಂಡು, ಎರಡು ವರ್ಷಗಳ ಅವಧಿಯನ್ನು ಪೂರೈಸಿರುವುದರಿಂದ ನಿಯಮಾನುಸಾರ ಪರಿವೀಕ್ಷಣಾವಧಿ ಘೋಷಣೆ ಮಾಡಲು ಸಭೆಯು ನಿರ್ಣಯಿಸಿತು. ಮುಂದುವರೆದು, ಕ್ರ.ಸಂ.11 ಮತ್ತು 12 ರಲ್ಲಿ ನಮೂದಿಸಿದ ನೌಕರರಿಗೆ ಈಗಾಗಲೇ ನಿಯಮಾನುಸಾರ ಪರಿವೀಕ್ಷಣಾವಧಿ ಘೋಷಣೆ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.02(h)/(07/25) |

**–:ಟಿಪ್ಪಣಿ:–**

**ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ರಜೆಗಳನ್ನು ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಪರಿಚಲಿಸುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:02.07.2025

*****

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ರಾಜ್ಯ ಸರ್ಕಾರದ ಮತ್ತು ಯುಜಿಸಿ ಮಾರ್ಗಸೂಚಿಗಳನ್ವಯ ಅನ್ಯಕಾರ್ಯ ನಿಮಿತ್ತ ರಜೆ ಮತ್ತು ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಬೇಕಾಗಿರುತ್ತದೆ. ಕೆಲವು ಪ್ರಾಧ್ಯಾಪಕರುಗಳು ಹೆಚ್ಚುವರಿ ಹಾಗೂ ಇತರೆ ಶೈಕ್ಷಣಿಕ ಕಾರ್ಯಗಳಿಗೆ ಸದರಿ ರಜೆಗಳನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸುತ್ತಿದ್ದು, ಈ ರೀತಿಯ ಮನವಿಗಳು ಆಡಿಟ್ ಆಕ್ಷೇಪಣೆಗಳಿಗೆ ಒಳಪಟ್ಟಿರುತ್ತವೆ. ಈ ಹಿನ್ನೆಲೆಯಲ್ಲಿ ಅನ್ಯಕಾರ್ಯ ನಿಮಿತ್ತ ಮತ್ತು ವಿಶೇಷ ಸಾಂದರ್ಭಿಕ ರಜೆಗಳಿಗೆ ಸಂಬಂಧಿಸಿದಂತೆ ರಾಜ್ಯ ಹಾಗೂ ಯುಜಿಸಿ ನಿಯಮಾವಳಿಗಳ ಪ್ರಕಾರ ಸಾಮಾನ್ಯ ಮಾರ್ಗಸೂಚಿಗಳನ್ನು ಪರಿಚಲಿಸಲು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸುವ ಬಗ್ಗೆ ದಿನಾಂಕ:04.07.2025ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಅನ್ಯಕಾರ್ಯ ನಿಮಿತ್ತ ಮತ್ತು ವಿಶೇಷ ಸಾಂದರ್ಭಿಕ ರಜೆಗಳಿಗೆ ಸಂಬಂಧಿಸಿದಂತೆ **ರಾಜ್ಯ ಹಾಗೂ ಯುಜಿಸಿ ನಿಯಮಾವಳಿಗಳ ಪ್ರಕಾರ ಸಾಮಾನ್ಯ ಮಾರ್ಗಸೂಚಿಗಳನ್ನು** ಪರಿಚಲಿಸಲು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.02(i)/(07/25) |

## –ಃಟಿಪ್ಪಣಿಃ–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿ ಮತ್ತು ಡಿ ಹೊರಗುತ್ತಿಗೆ ನೌಕರರ ಕುರಿತು.**

*****

ಸರ್ಕಾರದ ನಿರ್ದೇಶಾನುಸಾರ ದಿನಾಂಕಃ18.08.2009 ರಂದು ದಾವಣಗೆರೆ ವಿಶ್ವವಿದ್ಯಾನಿಲಯವು ಕುವೆಂಪು ವಿಶ್ವವಿದ್ಯಾನಿಲಯದಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಸ್ಥಾಪನೆಯಾಗಿರುತ್ತದೆ. ಪ್ರಾರಂಭದಲ್ಲಿ ಕೇವಲ 07 ಸ್ನಾತಕೋತ್ತರ ವಿಭಾಗಗಳಿದ್ದು, ಬೆರಳಣಿಕೆಯಷ್ಟು ಬೋಧಕ/ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದರು. ನಂತರ ಸರ್ಕಾರದ ವಿವಿಧ ಆದೇಶದನ್ವಯ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಒಟ್ಟು 178 ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತದೆ. ಕಾಲ ಕ್ರಮೇಣ ವಿಶ್ವವಿದ್ಯಾನಿಲಯವು ತನ್ನದೇ ಆದ ಪ್ರಗತಿಯೊಂದಿಗೆ ವಿವಿಧ ವಿಷಯಗಳ ವಿಭಾಗಗಳನ್ನು ಪರಿಚಯಿಸಲಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಾದ ಶೈಕ್ಷಣಿಕ/ಸಿಡಿಸಿ/ಮಾನವ ಸಂಪನ್ಮೂಲ/ಪ್ರಾಧಿಕಾರ/ಕ್ರೀಡಾ/ಎಸ್.ಸಿ. ಎಸ್.ಟಿ ಘಟಕ/ ತೋಟಗಾರಿಕೆ/ಪರೀಕ್ಷಾಂಗ/ಹಣಕಾಸು/ಬಿ.ಒ.ಎಸ್/ಶಿಷ್ಯವೇತನ ವಿಭಾಗ/ಗ್ರಂಥಾಲಯ ಮತ್ತಿತರೆ ವಿಭಾಗಗಳ ಕೆಲಸದ ಹೊರೆಯು ದಿನೇ ದಿನೇ ಹೆಚ್ಚಾಗುತ್ತಾ ಹೋಗಿದ್ದರಿಂದ ಕೇವಲ 37 ಖಾಯಂ ಬೋಧಕೇತರ ಸಿಬ್ಬಂದಿಗಳಿಂದ (ಎ ಬಿ ಸಿ ಮತ್ತು ಡಿ) ಕಛೇರಿ ಕಾರ್ಯ ನಿರ್ವಹಿಸುವುದು ಕ್ಲಿಷ್ಟಕರವಾಗಿತ್ತು. ವಿಶ್ವವಿದ್ಯಾನಿಲಯಕ್ಕೆ ಸರ್ಕಾರವು ಮಂಜೂರು ಮಾಡಲಾದ 178 ರಲ್ಲಿ ಖಾಯಂ 37 ಅಧ್ಯಾಪಕೇತರ ನೌಕರರುಗಳನ್ನು ಹೊರತುಪಡಿಸಿ ಬಾಕಿ 141 ಬೋಧಕೇತರ ಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಕೆಲಸ ಕಾರ್ಯಗಳನ್ನು ನಿಭಾಯಿಸಬೇಕಾಗಿತ್ತು ಆದರೆ ಈ ಮೇಲೆ ಸೂಚಿಸಲಾದ ಎಲ್ಲಾ ವಿಭಾಗಗಳ ಕಾರ್ಯಗಳು ದಿನೇ ದಿನೇ ಹೆಚ್ಚಾಗಿದ್ದರಿಂದ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಠಿಯಿಂದ ಹೆಚ್ಚುವರಿಯಾಗಿ 168 ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಮುಂದುವರೆದು ಸರ್ಕಾರದ ಆದೇಶ ಸಂಖ್ಯೆಃಇಡಿ 54 ಯುಎಸ್‌ವಿ 2022 ದಿನಾಂಕಃ12.09.2022 ರನ್ವಯ ಹೆಚ್ಚುವರಿ ನೇಮಕಾತಿಗೆ ಅವಕಾಶ ಇಲ್ಲದೇ ಇರುವುದು ಹಾಗೂ ಅನುದಾನ ಒದಗಿಸುವುದಿಲ್ಲವೆಂದು ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 141 ಮಂಜೂರಾದ ಬೋಧಕೇತರ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಸಂಬಂಧ, ಮಂಜೂರಾದ ಹುದ್ದೆಗಳಿಗಿಂತಲೂ, ಹೆಚ್ಚುವರಿಯಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಟ್ಟು 309 ಕರ್ತವ್ಯ ನಿರ್ವಹಿಸುತ್ತಿರುವ ನೌಕರರಲ್ಲಿ – ರಾಜಿನಾಮೆ, ಅಕಾಲಿಕ ಮರಣ, ವಯೋ ನಿವೃತ್ತಿ, ಅಪಘಾತ, ಮುಂತಾದವುಗಳಿಂದ ತೆರವಾದ ಹುದ್ದೆಗಳನ್ನು ಮುಂಬರುವ ದಿನಗಳಲ್ಲಿ ಭರ್ತಿ

**ಮುಂದುವರೆದಿದೆ...**

ಕುಲಸಚಿವರು

ಕುಲಪತಿಗಳು

ಮಾಡಿಕೊಳ್ಳದಿರಲು ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಆಡಳಿತ ಹಾಗೂ ಆರ್ಥಿಕ ಹಿತದೃಷ್ಟಿಯಿಂದ ಕ್ರಮೇಣವಾಗಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಕಡಿಮೆ ಮಾಡುವ ಕುರಿತು ಕ್ರಮ ವಹಿಸಲು ದಿನಾಂಕಃ04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

1. ಪುನರಾವರ್ತಿತಾ ಕರ್ತವ್ಯ ಲೋಪ, ಗೈರು ಹಾಜರಿ, ಅಸಮರ್ಥತೆ, ವಿಶ್ವವಿದ್ಯಾನಿಲಯದ ಗೌಪ್ಯ ಮಾಹಿತಿ ಹಾಗೂ ಇತರೆ ಆಡಳಿತಾತ್ಮಕ ವಿಷಯಗಳನ್ನು ಅನಧಿಕೃತವಾಗಿ ಭಹಿರಂಗ ಪಡಿಸುವುದು.
2. ವಿಶ್ವವಿದ್ಯಾನಿಲಯದ ನಿಯಮಗಳ ಉಲ್ಲಂಘನೆ ಹಾಗೂ ಆರ್ಥಿಕ ನಷ್ಟ ಉಂಟುಮಾಡುವುದು.
3. ವಿಶ್ವವಿದ್ಯಾನಿಲಯದ ಸಮಗ್ರತೆ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಧಕ್ಕೆ ಉಂಟುಮಾಡುವುದು.
4. ವಯೋನಿವೃತ್ತಿ, ಅಕಾಲಿಕ ಮರಣ ಹಾಗೂ ಇನ್ನಿತರೆ ಕಾರಣಗಳಿಂದ ತೆರವಾಗುವ ಸ್ಥಾನಗಳಿಗೆ ಬದಲಿ ನೌಕರರನನ್ನು ನೇಮಿಸಿಕೊಳ್ಳುವಂತಿಲ್ಲ.

ಮೇಲ್ಕಂಡ ಕ್ರ.ಸಂ. 1 ರಿಂದ 4 ರವರೆಗೆ ತಿಳಿಸಲಾಗಿರುವ ಪ್ರಸಂಗಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳಿಂದ ಉದ್ಭವಿಸಿದ್ದಲ್ಲಿ ಸಂಬಂಧಿಸಿದ ಏಜೆನ್ಸಿಗೆ ನೌಕರರನ್ನು ಕರ್ತವ್ಯದಿಂದ ತೆಗೆದು ಹಾಕುವಂತೆ ಹಾಗೂ ಕ್ರ.ಸಂ. 4 ಕ್ಕೆ ಸಂಬಂಧಿಸಿದಂತೆ ಕ್ರಮ ಜರುಗಿಸುವ ಕುರಿತು ದಿನಾಂಕಃ04.07.2025ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ದೃಶ್ಯಕಲಾ ಮಹಾವಿದ್ಯಾಲಯ, ತುರುವನೂರು, ಹರಿಯಬ್ಬೆ ಘಟಕ ಕಾಲೇಜುಗಳಲ್ಲಿ 'ಸಿ' ಮತ್ತು 'ಡಿ' ಗ್ರೂಪ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರಲ್ಲಿ **ರಾಜಿನಾಮೆ, ಅಕಾಲಿಕ ಮರಣ, ವಯೋನಿವೃತ್ತಿ, ಅಪಘಾತ** ಹಾಗೂ ಇನ್ನಿತರೆ ಕಾರಣಗಳಿಂದ ತೆರವಾಗುವ ಸ್ಥಾನಗಳಿಗೆ ಬದಲಿ ನೌಕರರನನ್ನು ನೇಮಿಸಿಕೊಳ್ಳುವಂತಿಲ್ಲ ಹಾಗೂ ಮುಂಬರುವ ದಿನಗಳಲ್ಲಿ ಹೊಸದಾಗಿ ಹೊರಗುತ್ತಿಗೆ ನೌಕಕರನ್ನು ಭರ್ತಿ ಮಾಡಿಕೊಳ್ಳಬಾರದೆಂದು (ತೀರಾ ಅವಶ್ಯತೆಯಿದ್ದಾಗ ತುರ್ತು ಕೆಲಸಗಳಿಗೆ ಹೊರಗುತ್ತಿಗೆ ನೌಕರರನ್ನು ತೆಗೆದುಕೊಳ್ಳುವುದನ್ನು ಹೊರತುಪಡಿಸಿ) ಸಭೆಯು ನಿರ್ಣಯಿಸಿತು.

ಮುಂದುವರೆದು, ಈ ಮೇಲ್ಕಂಡ 03 ಅಂಶಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳಿಂದ ಸದರಿ ಪ್ರಸಂಗಗಳು ಉದ್ಭವಿಸಿದ್ದಲ್ಲಿ ಸಂಬಂಧಿಸಿದ 'ಸಿ' ಮತ್ತು 'ಡಿ' ಗ್ರೂಪ್ ನೌಕರರನ್ನು ಕರ್ತವ್ಯದಿಂದ ತೆಗೆದುಹಾಕಲು ಏಜೆನ್ಸಿಯವರಿಗೆ ಸೂಚಿಸಲು ನಿರ್ಣಯಿಸಲಾಯಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 11 | |
| --- | --- |
| ವಿಷಯ ಸಂಖ್ಯೆ: | ಸಿಂ.02(j)/(07/25) |

## –:ಟಿಪ್ಪಣಿ:–

**ವಿಷಯ: ಡಾ. ಆರ್. ಶಶಿಧರ್ ಮತ್ತು ಡಾ. ಅಶೋಕ್‌ಕುಮಾರ್ ವೀ. ಪಾಳೇದ ಇವರುಗಳಿಗೆ Colombo, Srilanka ಗೆ ಹೋಗಿ ಬರಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಬಗ್ಗೆ.**

ಉಲ್ಲೇಖ: 1. ಪ್ರಾಧ್ಯಾಪಕರುಗಳ ಮನವಿ ದಿನಾಂಕ: 03.07.2025
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 03.07.2025

*****

ಉಲ್ಲೇಖ (1)ರ ಪತ್ರದಲ್ಲಿ ಡಾ. ಆರ್. ಶಶಿಧರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ ಮತ್ತು ಡಾ.ಅಶೋಕ್‌ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ – ಇವರುಗಳು ದಿನಾಂಕ:03.09.2025 ಮತ್ತು 04.09.2025 ರಂದು Colombo, Srilanka ದಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಮ್ಮೇಳನ ಸಹ ಅಧ್ಯಕ್ಷರಾಗಿ ಭಾಗವಹಿಸಲು ಮತ್ತು ಸಂಶೋಧನಾ ಪ್ರಬಂದವನ್ನು ಮಂಡಿಸಲು ದಿನಾಂಕ:02.09.2025 ರಿಂದ 06.09.2025ರವರೆಗೆ ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಸದರಿ ವಿಷಯವನ್ನು ದಿನಾಂಕ: 04.07.2025ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

**:: ನಿರ್ಣಯ ::**

ಡಾ. ಆರ್. ಶಶಿಧರ್, ಪ್ರಾಧ್ಯಾಪಕರು, ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಡಾ. ಅಶೋಕ್‌ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ಇವರು ದಿನಾಂಕ:02.09.2025 ರಿಂದ 06.09.2025ರವರೆಗೆ ಭಂಡಾರ ನಾಯಕೆ ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರ, ಬುದ್ಧಲೋಕ, ಕೋಲಂಬೋ(Colombo, Srilanka) – ಇಲ್ಲಿ ಏರ್ಪಡಿಸಲಾಗಿರುವ ಸಮ್ಮೇಳನಕ್ಕೆ Conference Cochair ಆಯ್ಕೆಯಾಗಿರುವುದರಿಂದ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(07/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಕಂಪ್ಯೂಟರ್ ಲ್ಯಾಬ್ ಮಾಡಿಸಲು ಅನುಮೋದನೆಗೆ ಮಂಡಿಸುವ ಬಗ್ಗೆ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ 2024–25ನೇ ಸಾಲಿನಿಂದ ಹೊಸದಾಗಿ Programming Lab-II ಹಾಗೂ Programming Lab-III ಕಂಪ್ಯೂಟರ್ ಕೋರ್ಸ್‌ಗಳ ಪಠ್ಯವನ್ನು ಪರಿಚಯಿಸಿದ್ದು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರತ್ಯೇಕವಾಗಿ ವಿದ್ಯಾರ್ಥಿಗಳಿಗೆ 60 ಸೀಟುಗಳು ಲಭ್ಯವಿರುವಂತೆ ಅಂದಾಜು ಮೊತ್ತ ರೂ.80.00 ಲಕ್ಷಗಳ ವೆಚ್ಚದ ಕಂಪ್ಯೂಟರ್ ಲ್ಯಾಬ್ ಅತ್ಯವಶ್ಯಕವಾಗಿದೆಯೆಂದು ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ಪಟ್ಟಿಯೊಂದಿಗೆ ಮನವಿ ಸಲ್ಲಿಸಿರುತ್ತಾರೆ. (ಉಪಕರಣಗಳ ಪಟ್ಟಿ ಲಗತ್ತಿಸಿದೆ)

ಆದ್ದರಿಂದ, ಮಾನ್ಯ ಕುಲಪತಿಗಳ ಮೌಖಿಕ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಂದಾಜು ವೆಚ್ಚ ರೂ.80.00 ಲಕ್ಷಗಳ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್ ಮಾಡಿಸಲು ದಿನಾಂಕ:04.07.2025 ರಂದು ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2024–25ನೇ ಸಾಲಿನಿಂದ ಹೊಸದಾಗಿ Programming Lab-II ಹಾಗೂ Programming Lab-III ಕಂಪ್ಯೂಟರ್ ಕೋರ್ಸ್‌ಗಳ ಪಠ್ಯವನ್ನು ಪರಿಚಯಿಸಿರುವುದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಂಶೋಧನಾ ಹಿತದೃಷ್ಟಿಯಿಂದ ಪ್ರತ್ಯೇಕವಾಗಿ ವಿದ್ಯಾರ್ಥಿಗಳಿಗೆ 60 ಸೀಟುಗಳು ಲಭ್ಯವಿರುವ ಕಂಪ್ಯೂಟರ್ ಲ್ಯಾಬ್‌ನ್ನು ಅಂದಾಜು ಮೊತ್ತ ರೂ.80.00 ಲಕ್ಷಗಳ ವೆಚ್ಚದಲ್ಲಿ ನಿಯಮಾನುಸಾರ ಇ–ಟೆಂಡರ್ ಮೂಲಕ ಕೈಗೊಳ್ಳಲು ಅನುಮತಿಸಲಾಯಿತು. ಸದರಿ ಲ್ಯಾಬ್‌ನ್ನು 2025–26ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

| ಅಭಿವೃದ್ಧಿ ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.03(b)/(07/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯಕ್ಕೆ ಸ್ವಚ್ಛತಾ ಮತ್ತು ಲೇಖನಾ ಸಾಮಾಗ್ರಿಗಳನ್ನು ದರ ಒಪ್ಪಂದದಡಿ ಖರೀದಿಸಿರುವುಕ್ಕೆ ಅನುಮತಿ ನೀಡುವ ಕುರಿತು.**

*****

ದಿನಾಂಕ:21.01.2025ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಲೇಖನಾ ಸಾಮಾಗ್ರಿಗಳಿಗೆ ರೂ.15,00,000/–ಗಳು ಹಾಗೂ ಸ್ವಚ್ಛತಾ ಸಾಮಾಗ್ರಿಗಳಿಗೆ ರೂ.10,00,000/– ಗಳಿಗೆ ಟೆಂಡರ್ ಕರೆಯಲು ಅನುಮೋದನೆ ಪಡೆಯಲಾಗಿತ್ತು. ಆದರೆ, ಟೆಂಡರ್‌ನಲ್ಲಿ ಒಂದು ಸಂಸ್ಥೆಯವರು ಭಾಗವಹಿಸಿದ್ದರಿಂದ ಟೆಂಡರ್ ರದ್ದು ಪಡಿಸಿ ಪುನಃ ದಿನಾಂಕ:02.06.2025ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಿದವರ ತಾಂತ್ರಿಕ ಮತ್ತು ಹಣಕಾಸು ಬಿಡ್ ಪರಿಶೀಲನಾ ಸಮಿತಿಯು **L-1** ಆಗಿರುವ **M/s S.J ENTERPRISES, DAVANAGERE -** ಸಂಸ್ಥೆಯವರನ್ನು ಆಯ್ಕೆ ಮಾಡಿರುತ್ತದೆ. ಈ ಸಂಬಂಧ ಸದರಿಯವರಿಂದ ದರ ಒಪ್ಪಂದದಡಿಯಲ್ಲಿ ಲೇಖನಾ ಮತ್ತು ಸ್ವಚ್ಛತಾ ಸಾಮಾಗ್ರಿಗಳನ್ನು ಖರೀದಿಸಿರುವ ಸಂಬಂಧ ದಿನಾಂಕ:04.07.2025 ರಂದು ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾಗಿ ಬೇಕಾಗಿರುವ ಸ್ವಚ್ಛತಾ ಮತ್ತು ಲೇಖನಾ ಸಾಮಾಗ್ರಿಗಳನ್ನು ಖರೀದಿಸುವ ಕುರಿತು ದಿನಾಂಕ:02.06.2025 ರಂದು ನಡೆದ ಟೆಂಡರ್‌ನಲ್ಲಿ ಯಶಸ್ವಿಯಾದ ಹಾಗೂ ತಾಂತ್ರಿಕ ಮತ್ತು ಹಣಕಾಸು ಬಿಡ್ ಪರಿಶೀಲನಾ ಸಮಿತಿಯು **L-1** ಆಗಿರುವ **M/s S.J Enterprises, Davanagere -** ಸಂಸ್ಥೆಯವರಿಂದ ಲೇಖನಾ ಮತ್ತು ಸ್ವಚ್ಛತಾ ಸಾಮಗ್ರಿಗಳನ್ನು ಸದರಿ ಸಂಸ್ಥೆಯವರಿಂದ ಖರೀದಿಸಿರುವುದಕ್ಕೆ ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಅಭಿವೃದ್ಧಿ ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.03(c)/(07/25) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ಅಗತ್ಯವಿರುವ ಪೀಠೋಪಕರಣಗಳನ್ನು ಒದಗಿಸಲು ಅನುಮೋದನೆ ನೀಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆವರಣದಲ್ಲಿನ ಪ್ರಸಾರಾಂಗದ ಕಛೇರಿಯನ್ನು ನೂತನವಾಗಿ ನಿರ್ಮಿಸಲಾಗಿದ್ದು, ಪ್ರಸಾರಾಂಗದ ವತಿಯಿಂದ ಶೈಕ್ಷಣಿಕ ಅಧ್ಯಯನಕ್ಕೆ ಪೂರಕವಾಗಿ ಪುಸ್ತಕ ಮತ್ತು ಸಂಶೋಧನಾ ಜರ್ನಲ್ ಪ್ರಕಟಣೆ, ವಿಶೇಷ ಉಪನ್ಯಾಸ, ವಿಶ್ವವಿದ್ಯಾನಿಲಯ ವಿಸ್ತರಣಾ ಕಾರ್ಯ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಿರುವ ಪೀಠೋಪಕರಣಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವುದನ್ನು ಒದಗಿಸಲು ನಿರ್ದೇಶಕರು, ಪ್ರಸಾರಾಂಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ಕೋರಿರುತ್ತಾರೆ.

**ಪೀಠೋಪಕರಣಗಳ ವಿವರ**

| ಕ್ರ.ಸಂ | ಸಾಮಾಗ್ರಿಗಳು | ಪ್ರಮಾಣ |
|---|---|---|
| 1. | ಕಂಪ್ಯೂಟರ್ | 1 |
| 2. | ಪ್ರಿಂಟರ್ | 1 |
| 3. | ಕಂಪ್ಯೂಟರ್ ಟೇಬಲ್ | 1 |
| 4. | ಕಂಪ್ಯೂಟರ್ ಕುರ್ಚಿ | 1 |
| 5. | ಪುಸ್ತಕ/ಜರ್ನಲ್ ರ್‍ಯಾಕ್ | 5 |
| 6. | ನಿರ್ದೇಶಕರ ಕಛೇರಿ ಕುರ್ಚಿ | 1 |
| 7. | ನಿರ್ದೇಶಕರ ಕಛೇರಿ ಟೇಬಲ್ | 1 |
| 8. | ನಿರ್ದೇಶಕರ ಕಛೇರಿ ಅತಿಥಿಗಳ ಕುರ್ಚಿ | 4 |
| 9. | ಸಲಹಾ ಸಮಿತಿ ಸಭೆಗಾಗಿ ಕುರ್ಚಿಗಳು | 10 |
| 10. | ಸಲಹಾ ಸಮಿತಿ ಸಭೆಗಾಗಿ ಟೇಬಲ್ | 2 |
| 11. | ಸಿಬ್ಬಂದಿ ಕುರ್ಚಿಗಳು | 2 |
| 12. | ಸಿಬ್ಬಂದಿ ಟೇಬಲ್ | 2 |
| 13. | ಕಪಾಟು | 2 |
| 14. | ಕಛೇರಿ ಫೈಲ್‌ಗಳು/ಫೋಲ್ಡರ್‌ಗಳು/ ಎನ್ವೊಲೋಪ್/ಕಾಗದ ಇತ್ಯಾದಿ | 100(ತಲಾ) |

ಆದ್ದರಿಂದ, ಸದರಿಯವರು ಕೋರಿರುವ ಈ ಮೇಲ್ಕಂಡ ಪೀಠೋಪಕರಣಗಳನ್ನು ಇ–ಟೆಂಡರ್‌ನಲ್ಲಿ ವಿಶ್ವವಿದ್ಯಾನಿಲಯದೊಂದಿಗೆ ಈಗಾಗಲೇ ದರ ಒಪ್ಪಂದ ಮಾಡಿಕೊಂಡ ಸಂಸ್ಥೆ **M/s Nandi Technology, Davanagere** – ಇವರಿಂದ ಖರೀದಿಸುವ ಬಗ್ಗೆ ಹಾಗೂ ಸದರಿ ಪೀಠೋಪಕರಣಗಳ ಖರೀದಿಯ ಅಂದಾಜು ವೆಚ್ಚಗಳ ಮೊತ್ತ ರೂ.8.00 ಲಕ್ಷಗಳಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ಪೀಠೋಪಕರಣಗಳನ್ನು ಅಂದಾಜು ಮೊತ್ತ ರೂ.8.00 ಲಕ್ಷಗಳ ವೆಚ್ಚದಲ್ಲಿ **M/s Nandi Technology, Davanagere** – ಸಂಸ್ಥೆಯವರಿಂದ ಖರೀದಿಸಲು ದಿನಾಂಕ:04.07.2025ರಂದು ಜರುಗುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಶೈಕ್ಷಣಿಕ ಅಧ್ಯಯನಕ್ಕೆ ಪೂರಕವಾಗಿ ಪುಸ್ತಕ ಮತ್ತು ಸಂಶೋಧನಾ ನಿಯತಕಾಲಿಕೆಗಳ ಪ್ರಕಟಣೆ, ವಿಶೇಷ ಉಪನ್ಯಾಸ, ವಿಶ್ವವಿದ್ಯಾನಿಲಯ ವಿಸ್ತರಣಾ ಕಾರ್ಯ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಿರುವ ಈ ಮೇಲ್ಕಂಡ ಯಂತ್ರೋಪಕರಣ/ಪೀಠೋಪಕರಣಗಳನ್ನು ಈಗಾಗಲೇ ದರ ಒಪ್ಪಂದ ಮಾಡಿಕೊಂಡ ಸಂಸ್ಥೆ **M/s Nandi Technology, Davanagere** – ಇವರಿಂದ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು      ಕುಲಪತಿಗಳು

| ಅಭಿವೃದ್ಧಿ ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.03(d)/(07/25) |

## –:ಟಿಪ್ಪಣಿ:–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ವಜ್ರ ಮಹೋತ್ಸವ ಪ್ರಯುಕ್ತ ಊಟೋಪಚಾರ ಸರಬರಾಜು ಮಾಡಿದ ಮೊತ್ತ ರೂ.2,47,500/- ಗಳ ಪಾವತಿ ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ದಿನಾಂಕ:30.05.2025 ಹಾಗೂ 31.05.2025 ರಂದು ಜರುಗಿದ ವಜ್ರ ಮಹೋತ್ಸವ ಪ್ರಯುಕ್ತ ಊಟೋಪಚಾರ ಸರಬರಾಜು ಮಾಡಿದ ಮೊತ್ತ ರೂ.2,47,500/- ಗಳನ್ನು ದರಪಟ್ಟಿಯಲ್ಲಿ ಯಶಸ್ವಿಯಾದ ಸಂಸ್ಥೆ Sri Nandi Enterprises, Davangere ಇವರಿಗೆ ಮೊತ್ತ ಪಾವತಿಸಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ದಿನಾಂಕ:30.05.2025 ಹಾಗೂ 31.05.2025 ರಂದು ಜರುಗಿದ ವಜ್ರಮಹೋತ್ಸವ ಪ್ರಯುಕ್ತ ಊಟೋಪಚಾರ ಸರಬರಾಜು ಮಾಡಿದ ಮೊತ್ತ ರೂ.2,47,500/- ಗಳನ್ನು ದರಪಟ್ಟಿಯಲ್ಲಿ ಯಶಸ್ವಿಯಾದ ಸಂಸ್ಥೆ Sri Nandi Enterprises, Davangere ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಸಂಶೋಧನಾ ಅಭಿವೃದ್ಧಿ ಕೋಶ – 16 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(07/25) |

## –:ಟಿಪ್ಪಣಿ:–

ವಿಷಯ: **ಡಾ. ರೂಪೇಶ್ ಕುಮಾರ್ ಆರ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ವಿ.ವಿ. ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿ/ಪಿಹೆಚ್.ಡಿ./075/2025–26/882, ದಿನಾಂಕ:29.05.2025

*****

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾದ **ಡಾ. ರೂಪೇಶ್ ಕುಮಾರ್ ಆರ್.,** ಇವರು ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡು "ಸಂಶೋಧನಾ ಮಾರ್ಗದರ್ಶಕರನ್ನಾಗಿ" ಮಾನ್ಯತೆ ನೀಡುವಂತೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದಲ್ಲಿ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವ ಕುರಿತು ದಿನಾಂಕ:04.07.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿ.ಹೆಚ್.ಡಿ) ಪದವಿ ಪಡೆದಿರುವ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ರೂಪೇಶ್ ಕುಮಾರ್ ಆರ್., ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

## -:ಟಿಪ್ಪಣಿ:-

ವಿಷಯಃ ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಪದವಿಗೆ ಪ್ರವೇಶಾತಿ ಪಡೆದ ವಿಶೇಷ ಚೇತನ ಸಂಶೋಧನಾ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡುವ ಕುರಿತು.

ಉಲ್ಲೇಖಃ ಮೈಸೂರು ವಿಶ್ವವಿದ್ಯಾನಿಲಯದ ಸುತ್ತೋಲೆ ಸಂಖ್ಯೆ:ಡಿ.ಓ.ಆರ್9.5/ ಪಿಹೆಚ್.ಡಿ/PH/2013-14, ದಿನಾಂಕ:30.06.2022

*****

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಅಧಿಸೂಚಿಸಿದ ಪಿಹೆಚ್.ಡಿ. ಪದವಿಗೆ ಶ್ರೀ ವಿರೇಂದ್ರ ಎ., (100% Disabled, Disability Type : Blindness) ಅಭ್ಯರ್ಥಿಯು ನಿಯಮಾನುಸಾರ ಅರ್ಜಿ ಸಲ್ಲಿಸಿ ಆಯ್ಕೆಯಾಗಿರುತ್ತಾರೆ. ಸದರಿ ಅಭ್ಯರ್ಥಿಯು ಕೆಸೆಟ್-2024 ಹಾಗೂ UGC-NET-Ph.D. ತೇರ್ಗಡೆ ಹೊಂದಿರುತ್ತಾರೆ ಸದರಿ ಅಭ್ಯರ್ಥಿಯು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ. ಸಂಶೋಧಕರಿಗೆ 2022ರಲ್ಲಿ ಶಿಷ್ಯವೇತನ ಪಡೆಯುತ್ತಿರುವ ಶೇ.50 ಕ್ಕಿಂತ ಹೆಚ್ಚಿನ ವಿಶೇಷ ಚೇತನ ಸಂಶೋಧನಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶೇಷ ಚೇತನ ಸಂಶೋಧನಾರ್ಥಿಗೆ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಶೇ.50 ಕ್ಕಿಂತ ಹೆಚ್ಚಿನ ವಿಶೇಷ ಚೇತನ ಸಂಶೋಧನಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ಎಷ್ಟು ವಿನಾಯಿತಿ ನೀಡಬೇಕು ಎಂಬುದರ ಕುರಿತು ದಿನಾಂಕ:04.07.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಚರ್ಚಿಸಲು ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಪಿಹೆಚ್.ಡಿ. ಗೆ ಪ್ರವೇಶ ಪಡೆದಿರುವ ಸಂಶೋಧನಾರ್ಥಿಗಳಲ್ಲಿ ಶೇಕಡ 50% ಕ್ಕಿಂತ ಹೆಚ್ಚಿನ ವಿಶೇಷ ಚೇತನ ಹೊಂದಿರುವ ಸಂಶೋಧನಾರ್ಥಿಗಳಿಗೆ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಲು ಪ್ರವೇಶ ಶುಲ್ಕದಲ್ಲಿ ಶೇ.100% ರಷ್ಟು ವಿನಾಯಿತಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(07/25) |

**–:ಟಿಪ್ಪಣಿ:–**

ವಿಷಯ: **2022–23 ಮತ್ತು 2023–24ನೇ ಸಾಲಿನ ಲೆಕ್ಕಪರಿಶೋದನಾ ವರದಿ ಹಾಗೂ ಅನುಸರಣಾ ವರದಿಗಳ ಮುದ್ರಣ ಪ್ರತಿಗಳನ್ನು ವಿಧಾನ ಮಂಡಲದ ಉಭಯ ಸದನಗಳಿಗೆ ಮಂಡಿಸಲು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ 2022–23 ಮತ್ತು 2023–24ನೇ ಸಾಲಿನ ಲೆಕ್ಕಪರಿಶೋದನಾ ವರದಿ ಹಾಗೂ ಅನುಸರಣಾ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಿಗೆ ಸಲ್ಲಿಸಬೇಕಾಗಿದ್ದು, ಸದರಿ ಲೆಕ್ಕ ಪರಿಶೋದನಾ ವರದಿಗಳನ್ನು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ 2022–23 ಮತ್ತು 2023–24ನೇ ಸಾಲಿನ ಲೆಕ್ಕಪರಿಶೋದನಾ ವರದಿ ಹಾಗೂ ಅನುಸರಣಾ ವರದಿಯನ್ನು ಸರ್ಕಾರದ ವಿಧಾನ ಮಂಡಲದ ಉಭಯ ಸದನಗಳಿಗೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಹಣಕಾಸು ವಿಭಾಗ –19 | |
|---|---|
| ವಿಷಯ ಸಂಖ್ಯೆ: | ಸಿಂ.05(b)/(07/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಸಂಶೋಧನಾ ಕಾರ್ಯಗಳಿಗಾಗಿ PFMS ಮುಖೇನ Union Bank of India ದ ಬ್ಯಾಂಕಿನಲ್ಲಿ ಹೊಸ ಉಳಿತಾಯ ಖಾತೆಯನ್ನು ತೆರೆಯಲು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ, ಗಣಿತ ಶಾಸ್ತ್ರ ಅಧ್ಯಯನ ವಿಭಾಗದ ಡಾ. ಪ್ರಸನ್ನ ಕುಮಾರ್, ಪ್ರಿನ್ಸಿಪಲ್ ಇನ್ವೆಸ್ಟಿಗೇಟರ್, ಇವರಿಗೆ ಎ.ಎನ್.ಆರ್.ಎಫ್–ಎಸ್.ಇ.ಆರ್.ಬಿ.(ANRF-SERB)ಸಂಸ್ಥೆ ವತಿಯಿಂದ ಮಂಜೂರಾದ ಸಂಶೋಧನಾ ಯೋಜನೆಯಡಿಯಲ್ಲಿ ಬಿಡುಗಡೆಯಾಗುವ ಅನುದಾನದ ಸ್ವೀಕೃತಿ ಮತ್ತು ವೆಚ್ಚಗಳಿಗಾಗಿ, ಹೊಸದಾಗಿ ಪಿ.ಎಫ್,ಎಂ.ಎಸ್ ಮುಖೇನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬ್ಯಾಂಕಿನಲ್ಲಿ ಖಾತೆ ತೆರೆಯಲು ನಿರ್ದೇಶನ ನೀಡಿರುವುದರಿಂದ ಹೊಸ ಉಳಿತಾಯ ಖಾತೆಯನ್ನು ಪ್ರಾರಂಭಿಸಲು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ, ಗಣಿತಶಾಸ್ತ್ರ ಅಧ್ಯಯನ ವಿಭಾಗದ ಡಾ. ಪ್ರಸನ್ನ ಕುಮಾರ್, ಪ್ರಿನ್ಸಿಪಲ್ ಇನ್ವೆಸ್ಟಿಗೇಟರ್, ಇವರಿಗೆ ಎ.ಎನ್.ಆರ್.ಎಫ್–ಎಸ್.ಇ.ಆರ್.ಬಿ. (ANRF-SERB) ಸಂಸ್ಥೆ ವತಿಯಿಂದ ಮಂಜೂರಾದ ಸಂಶೋಧನಾ ಯೋಜನೆಯಡಿಯಲ್ಲಿ ಬಿಡುಗಡೆಯಾಗುವ ಅನುದಾನದ ಸ್ವೀಕೃತಿ ಮತ್ತು ವೆಚ್ಚಗಳಿಗಾಗಿ, ಹೊಸದಾಗಿ ಪಿ.ಎಫ್.ಎಂ.ಎಸ್ ಮುಖೇನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬ್ಯಾಂಕಿನಲ್ಲಿ ಹೊಸ ಉಳಿತಾಯ ಖಾತೆಯನ್ನು ಆರಂಭಿಸಲು ಸದರಿ ಸಂಸ್ಥೆಯವರು ಖಾತೆಯನ್ನು ತೆರೆಯಲು ನಿರ್ದೇಶನ ನೀಡಿರುವುದರಿಂದ ಸದರಿ ಬ್ಯಾಂಕಿನಲ್ಲಿ ಖಾತೆ ತೆರೆಯಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

**–ಃಟಿಪ್ಪಣಿಃ–**

**ವಿಷಯಃ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿ.ಹೆಚ್.ಡಿ. ಪೂರ್ಣಕಾಲಿಕ ಸಂಶೋಧನಾರ್ಥಿಗಳ ಬೇಡಿಕೆಯ ಕುರಿತು.**

*****

ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಹೆಚ್.ಡಿ ಪೂರ್ಣಕಾಲಿಕ ಸಂಶೋಧನಾರ್ಥಿಗಳು ಅಂತಿಮ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂದಾಜು ರೂ.20,000/–ಗಳು ವೆಚ್ಚವಾಗುವುದರಿಂದ ಸದರಿ ವೆಚ್ಚವನ್ನು ವಿಶ್ವವಿದ್ಯಾನಿಲಯದಿಂದ ಭರಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಹೆಚ್.ಡಿ ಪೂರ್ಣಕಾಲಿಕ ಸಂಶೋಧನಾರ್ಥಿಗಳು ಅಂತಿಮ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಲು ತಗುಲಿದ ಖರ್ಚು ವೆಚ್ಚದ ಬಿಲ್ಲುಗಳನ್ನು ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸಿದ್ದಲ್ಲಿ ಮಾತ್ರ ರೂ.20,000/– ಗಳನ್ನು ಸಂಬಂಧಪಟ್ಟ ಸಂಶೋಧನಾರ್ಥಿಗೆ ಭರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಪುರುಷ ವಸತಿ ನಿಲಯಕ್ಕೆ UGD (Underground Drainage) Line ಸೌಲಭ್ಯ ಕಲ್ಪಿಸಿರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಪುರುಷ ವಸತಿ ನಿಲಯಕ್ಕೆ UGD (Underground Drainage) Line ಸೌಲಭ್ಯ ಕಲ್ಪಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.7.00 ಲಕ್ಷಗಳನ್ನು KRIDL ದಾವಣಗೆರೆ ಇವರ ಮುಂಖಾತರ ಕೈಗೊಳ್ಳಲು ಕಾಮಗಾರಿಗೆ ವಿಶ್ವವಿದ್ಯಾನಿಲಯದಿಂದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದುದರಿಂದ, ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಪುರುಷ ವಸತಿ ನಿಲಯಕ್ಕೆ UGD (Underground Drainage) Line ಸೌಲಭ್ಯ ಕಲ್ಪಿಸುವ ಕಾಮಗಾರಿಯನ್ನು ಅಂದಾಜು ಮೊತ್ತ ರೂ.7.00 ಲಕ್ಷ ಮಿತಿಯೊಳಗೆ KRIDL ದಾವಣಗೆರೆ ಇವರ ಮುಖಾಂತರ ಕೈಗೊಂಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(07/25) |

**–ಃಟಿಪ್ಪಣಿಃ–**

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ & ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹವಾನಿಯಂತ್ರಕ (AC) ಗಳನ್ನು ಸರಬರಾಜು ಮಾಡಿರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ & ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹವಾನಿಯಂತ್ರಕ (AC) ಗಳನ್ನು ತುರ್ತಾಗಿ ದರಪಟ್ಟಿ ಆಧಾರದ ಮೇಲೆ ಖರೀಧಿಸಿ ಅಳವಡಿಸಿದ್ದು, ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.1.56 ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹವಾನಿಯಂತ್ರಕ (AC) ಗಳನ್ನು ತುರ್ತಾಗಿ ದರಪಟ್ಟಿ ಆಧಾರದ ಮೇಲೆ ರೂ.1.56 ಲಕ್ಷ ಮಿತಿಯೊಳಗೆ ಖರೀದಿಸಿ ಅಳವಡಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.07(c)/(07/25) |

## –ಃಟಿಪ್ಪಣಿಃ–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಬೀದಿ ದೀಪಗಳ ರಿಪೇರಿ ಮತ್ತು ಹೊಸದಾಗಿ LED Street light ಗಳನ್ನು ಅಳವಡಿಸಿರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಮಹಿಳಾ ವಸತಿ ನಿಲಯಗಳ ಮುಂಭಾಗದಲ್ಲಿ, ಪುರುಷ ವಸತಿ ನಿಲಯಗಳ ಮುಂಭಾಗದಲ್ಲಿ ಹಾಗೂ ಶೈಕ್ಷಣಿಕ ಕಟ್ಟಡಗಳ ಮುಂಭಾಗದಲ್ಲಿ ಬೀದಿ ದೀಪಗಳು ಹಾಳಾಗಿರುತ್ತವೆ. ಇದರಿಂದಾಗಿ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ರಾತ್ರಿ ಸಮಯದಲ್ಲಿ ತುಂಬಾ ತೊಂದರೆ ಆಗುತ್ತಿದ್ದು ತುರ್ತಾಗಿ LED Street light ಗಳನ್ನು ಹಾಕಿಸುವ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.3.34 ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಮಹಿಳಾ & ಪುರುಷ ವಸತಿ ಮುಂಭಾಗದಲ್ಲಿ ಹಾಗೂ ಶೈಕ್ಷಣಿಕ ಕಟ್ಟಡಗಳ ಮುಂಭಾಗದಲ್ಲಿ LED Street light ಗಳನ್ನು ತುರ್ತಾಗಿ ದರಪಟ್ಟಿ ಆಧಾರದ ಮೇಲೆ ರೂ.3.34 ಲಕ್ಷ ಮಿತಿಯೊಳಗೆ ಖರೀದಿಸಿ ಅಳವಡಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

## -:ಟಿಪ್ಪಣಿ:-

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ವಜ್ರಮಹೋತ್ಸವ ಕಾರ್ಯಕ್ರಮ ಹಿನ್ನಲೆಯಲ್ಲಿ ಶಾಮಿಯಾನ ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸಿರುವ ಕುರಿತು.

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿ 60ನೇ ವರ್ಷದ ವಜ್ರಮಹೋತ್ಸವ ಕಾರ್ಯಕ್ರಮದ ಹಿನ್ನಲೆಯಲ್ಲಿ ಬಾಡಿಗೆ ಆಧಾರದ ಮೇಲೆ ಶಾಮಿಯಾನ ಹಾಗೂ ಇತರೆ ಪರಿಕರಗಳನ್ನು ಪೂರೈಸಿದ್ದು ಈ ಕೆಲಸವನ್ನು ದರಪಟ್ಟಿ ಆಧಾರದ ಮೇಲೆ ರೂ.4.73ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

| Sl. No. | Description of Material | Unit | Qty | Rate | Amount |
|---|---|---|---|---|---|
| | Supplying and Erection of Pendal (Shamiyana) & other works at Fine Arts College for 60Years of Vajramahotasva Functions | | | | |
| 1 | Synthetic Mat 6X300 For 2 Days | Sqft | 1800 | 10.00 | 36,000.00 |
| 2 | Stage Flower Decoration | No | 01 | 16,000.00 | 16,000.00 |
| 3 | VVIP Chairs For 2 Days | No | 10 | 1000.00 | 20,000.00 |
| 4 | VIP Chairs For 2 Days | No | 10 | 500.00 | 10,000.00 |
| 5 | Plastic Chairs with Cloth Cover For 3 Days | No | 400 | 25.00 | 30,000.00 |
| 6 | Podium For 2 Days | No | 01 | 1800.00 | 3600.00 |
| 7 | Teapai For 2 Days | No | 06 | 800.00 | 9600.00 |
| 8 | Round Table with Cloth Cover For 3 Days | No | 10 | 400.00 | 12,000.00 |
| 9 | Hand wash For 3 Days | No | 02 | 500.00 | 3000.00 |
| 10 | Dining Table with Cloth Covers For 3 Days | No | 10 | 180.00 | 5400.00 |
| 11 | Truss Pendal 40X60 For 3 Days | Sqft | 1200 | 40.00 | 1,44,000.00 |
| 12 | Floor Mat for Pendal 40X60 For 3 Days | Sqft | 1200 | 5.00 | 18,000.00 |
| 13 | Pipe Pendal 15X80 For 3 Days | Sqft | 1200 | 20.00 | 72,000.00 |
| 14 | Side Wall For 3 Days | No | 10 | 600.00 | 18,000.00 |
| 15 | Deepa For 2Days | No | 01 | 2000.00 | 4000.00 |
| | | | | **Total:** | **4,01,600.00** |
| | | | | GST 18 % | 72,288.00 |
| | | | | **Grand Total :** | **4,73,888.00** |

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿ 60ನೇ ವರ್ಷದ ವಜ್ರಮಹೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಈ ಮೇಲ್ಕಂಡ ಸಾಮಗ್ರಿಗಳನ್ನು ತುರ್ತಾಗಿ ಬಾಡಿಗೆ ಆಧಾರದಲ್ಲಿ ದರಪಟ್ಟಿ ಆಧಾರದ ಮೇಲೆ ರೂ.4.73ಲಕ್ಷ ಲಕ್ಷ ಮಿತಿಯೊಳಗೆ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.07(e)/(07/25) |

## –:ಟಿಪ್ಪಣಿ:–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ವಜ್ರಮಹೋತ್ಸವ ಕಾರ್ಯಕ್ರಮ ಹಿನ್ನಲೆಯಲ್ಲಿ ಎಲ್ಲ ಕಲಾಕೃತಿಗಳಿಗೆ Focus Light ಮತ್ತು ದೃಶ್ಯಕಲಾ ಮಹಾವಿದ್ಯಾಲಯದ ಆವರಣಕ್ಕೆ Serial light ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸಿರುವ ಕುರಿತು.

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿ 60ನೇ ವರ್ಷದ ವಜ್ರಮಹೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಬಾಡಿಗೆ ಆಧಾರದ ಮೇಲೆ ಕಲಾಕೃತಿಗಳಿಗೆ Focus Light ಮತ್ತು ದೃಶ್ಯಕಲಾ ಮಹಾವಿದ್ಯಾನಿಲಯ ಆವರಣಕ್ಕೆ ಬಾಡಿಗೆ ಆಧಾರದ ಮೇಲೆ Serial Light ಗಳನ್ನು ಮತ್ತು ಇತರೆ ಪರಿಕರಗಳನ್ನು ಪೂರೈಸಿದ್ದು ಈ ಕೆಲಸವನ್ನು ದರಪಟ್ಟಿ ಆಧಾರದ ಮೇಲೆ ರೂ.4.69 ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ: 04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

| Sl. No. | Description of Material | Unit | Qty | Rate | Amount |
|---|---|---|---|---|---|
| | Supplying of Electrical Lightings, Sound System and other works at Fine Arts College for 60Years of Vajramahotasva Functions | | | | |
| 1 | Focus Light For 3 Days | No | 60 | 450.00 | 81,000.00 |
| 2 | LED Par light For 3 Days | No | 30 | 600.00 | 54,000.00 |
| 3 | LED Serial Light For 3 Days | No | 700 | 80.00 | 1,68,000.00 |
| 4 | LED Bulb Serial Light For 2 Days | No | 20 | 900.00 | 54,000.00 |
| 5 | Sound System For 2 Days | No | 01 | 18,000.00 | 36,000.00 |
| 6 | Cordless Mice For 2 Days | No | 02 | 550.00 | 2200.00 |
| 7 | Podium Mice For 2 Days | No | 01 | 1200.00 | 2400.00 |
| | | | | **Total:** | **3,97,600.00** |
| | | | | GST 18 % | 71,568.00 |
| | **Grand Total :** | | | | **4,69,168.00** |

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿ 60ನೇ ವರ್ಷದ ವಜ್ರಮಹೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕಲಾಕೃತಿಗಳಿಗೆ Focus Light, ದೃಶ್ಯಕಲಾ ಮಹಾವಿದ್ಯಾನಿಲಯ ಆವರಣಕ್ಕೆ Serial Light ಗಳನ್ನು ಮತ್ತು ಇತರೆ ಪರಿಕರಗಳನ್ನು ಬಾಡಿಗೆ ಆಧಾರದಲ್ಲಿ ದರಪಟ್ಟಿ ಆಧಾರದ ಮೇಲೆ ರೂ.4.69 ಲಕ್ಷ ಮಿತಿಯೊಳಗೆ ಪೂರೈಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.07(f)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ಆರ್ಟ್ ಗ್ಯಾಲರಿಗೆ Tracks light ಗಳನ್ನು ಅಳವಡಿಸಲು Steel Frame ಗಳನ್ನು ಅಳವಡಿಸಿರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿನ ಆರ್ಟ್ ಗ್ಯಾಲರಿಗೆ Tracks light ಗಳನ್ನು ಅಳವಡಿಸಲು Steel Frame ಗಳ ಅವಶ್ಯಕತೆ ಇದ್ದು ವಜ್ರಮಹೋತ್ಸವ ಕಾರ್ಯಕ್ರಮ ಹಿನ್ನಲೆಯಲ್ಲಿ ತುರ್ತಾಗಿ ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.2.00ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯ ಆವರಣದಲ್ಲಿನ 60ನೇ ವರ್ಷದ ವಜ್ರಮಹೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಆರ್ಟ್ ಗ್ಯಾಲರಿಗೆ Tracks light ಗಳನ್ನು ಅಳವಡಿಸಲು Steel Frame ಗಳನ್ನು ಅಳವಡಿಸುವ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.2.00ಲಕ್ಷ ಮಿತಿಯೊಳಗೆ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                                  ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 27 | |
|---|---|
| ವಿಷಯ ಸಂಖ್ಯೆ: | ಸಿಂ.07(g)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ತುಂಗಾ ಮಹಿಳಾ ವಸತಿ ನಿಲಯಕ್ಕೆ ಬಟ್ಟೆ ತೊಳೆಯಲು "ಡೋಬಿ ಕಟ್ಟೆ (Laundry racks)" ಗಳನ್ನು ನಿರ್ಮಾಣ ಮಾಡಿರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ತುಂಗಾ ಮಹಿಳಾ ವಸತಿ ನಿಲಯಲದ ವಿದ್ಯಾರ್ಥಿನಿಯರಿಗೆ ಬಟ್ಟೆ ತೊಳೆಯಲು "ಡೋಬಿ ಕಟ್ಟೆ (Laundry racks)"ಗಳು ಇರುವುದಿಲ್ಲ. ಆದ್ದರಿಂದ, ಬಟ್ಟೆ ತೊಳೆಯಲು 05 ಸಂಖ್ಯೆ ತೊಳೆಯುವ ಕಲ್ಲುಗಳನ್ನು ಹಾಕಿಸಿಕೊಡುವಂತೆ ಮಹಿಳಾ ವಸತಿ ನಿಲಯದ ಮುಖ್ಯ ನಿಲಯಪಾಲಕರು ಕೋರಿರುತ್ತಾರೆ. ಆದ್ದರಿಂದ, ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಬಟ್ಟೆ ತೊಳೆಯಲು "ಡೋಬಿ ಕಟ್ಟೆ(Laundry racks)" ಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.1.30 ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ತುಂಗಾ ಮಹಿಳಾ ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ಬಟ್ಟೆ ತೊಳೆಯಲು 05 ಸಂಖ್ಯೆ "ಡೋಬಿ ಕಟ್ಟೆ (Laundry racks)"ಗಳನ್ನು ದರಪಟ್ಟಿ ಆಧಾರದ ಮೇಲೆ ರೂ.1.30 ಲಕ್ಷ ಮಿತಿಯೊಳಗೆ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 28 | |
|---|---|
| ವಿಷಯ ಸಂಖ್ಯೆ: | ಸಿಂ.07(h)/(07/25) |

**–:ಟಿಪ್ಪಣಿ:–**

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದ ಹಿಂಭಾಗದಲ್ಲಿ Compound Wall ನಿರ್ಮಾಣ ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಸ್ಥಾಪನೆ ಆದಾಗಿನಿಂದ ವಿಶ್ವವಿದ್ಯಾನಿಲಯಕ್ಕೆ Compound Wall ಇರುವುದಿಲ್ಲ. ಸದ್ಯ Barbed Wire Fencing ಇದ್ದು 12 ವರ್ಷದಷ್ಟು ಹಳೆಯದಾಗಿದ್ದು ಸಂಪೂರ್ಣ ಕಿತ್ತು ಹೋಗಿರುತ್ತದೆ. ಇದರಿಂದಾಗಿ ಪ್ರಾಣಿಗಳು ವಿಶ್ವವಿದ್ಯಾನಿಲಯದೊಳಗೆ ಬರುತ್ತಿವೆ. ಅಲ್ಲದೇ ರಾತ್ರಿ ಸಮಯದಲ್ಲಿ ವಸತಿ ನಿಲಯದ ವಿದ್ಯಾರ್ಥಿಗಳು ಹೊರಗಡೆ ಹೋಗುತ್ತಿರುತ್ತಾರೆ. ಆದ್ದರಿಂದ, ಪ್ರಥಮ ಹಂತದಲ್ಲಿ ಆಧ್ಯತೆಯ ಮೇರೆಗೆ ರೂ.100.00 ಲಕ್ಷಗಳ ಮಿತಿಯೊಳಗೆ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕೇಂದ್ರ/ರಾಜ್ಯ ಸರ್ಕಾರದ ಸಂಸ್ಥೆಯ ಮುಖಾಂತರ ಕೈಗೊಳ್ಳಲು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣಕ್ಕೆ Compound Wall ನ್ನು ರೂ.100.00 ಲಕ್ಷಗಳ ಮಿತಿಯೊಳಗೆ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕೇಂದ್ರ/ರಾಜ್ಯ ಸರ್ಕಾರದ ಸಂಸ್ಥೆಯ ಮುಖಾಂತರ ವಿಶ್ವವಿದ್ಯಾನಿಲಯದ ಹಣಕಾಸಿನ ಲಭ್ಯತೆ ನೋಡಿಕೊಂಡು ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 29 | |
|---|---|
| ವಿಷಯ ಸಂಖ್ಯೆ: | ಸಿಂ.07(i)/(07/25) |

# –:ಟಿಪ್ಪಣಿ:–

**ವಿಷಯ:** **ಚಿತ್ರದುರ್ಗ ವೈದ್ಯಕೀಯ ಕಾಲೇಜು & ಸಂಶೋಧನಾ ಸಂಸ್ಥೆ (CMC&RI), ಚಿತ್ರದುರ್ಗ & ದಾವಣಗೆರೆ ವಿಶ್ವವಿದ್ಯಾನಿಲಯ ಸಂಸ್ಥೆಗಳು ಮಾಡಿಕೊಂಡ ಒಪ್ಪಂದ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ:ಇಡಿ 12 ಯುಎನ್ಇ 2023 ದಿನಾಂಕ: 19.07.2023.
2. ಕರಾರು ಒಪ್ಪಂದ ದಿನಾಂಕ: 11.08.2023.
3. ನಿರ್ದೇಶಕರು, ವೈದ್ಯಕೀಯ ಕಾಲೇಜು, ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ ಇವರ ಪತ್ರ ಸಂಖ್ಯೆ:ವೈಕಾಚಿ/ಜಿ/ಆಡಳಿತ/ MOU/ ದಾವಿವಿ/81/2025–26 ದಿನಾಂಕ: 20/05/2025
4. ಸರ್ಕಾರದ ಪತ್ರ ಸಂಖ್ಯೆ: ಇಡಿ 12 ಯುಎನ್ಇ 2023 ದಿನಾಂಕ: 02/06/2025

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಆವರಣದಲ್ಲಿನ ತರಗತಿ ಕೊಠಡಿಗಳನ್ನು ಚಿತ್ರದುರ್ಗ ವೈದ್ಯಕೀಯ ಕಾಲೇಜು & ಸಂಶೋಧನಾ ಸಂಸ್ಥೆ (CMC&RI), ಚಿತ್ರದುರ್ಗ ಇವರಿಗೆ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಉಲ್ಲೇಖ(01)ರ ಸರ್ಕಾರದ ನಿರ್ದೇಶನದಂತೆ ಹಾಗೂ ವಿಶ್ವವಿದ್ಯಾನಿಲಯದ ದಿನಾಂಕ:31.07.2023 ರಂದು ನಡೆದ ಸಿಂಡಿಕೇಟ್ ನಿರ್ಣಯದಂತೆ ಉಲ್ಲೇಖ(02)ರಲ್ಲಿ ಕರಾರು ಒಪ್ಪಂದ ಮಾಡಿಕೊಂಡು ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಒಪ್ಪಂದವು ದಿನಾಂಕ:11.08.2025 ಕ್ಕೆ ಪೂರ್ಣಗೊಳ್ಳುವುದರಿಂದ, ಉಲ್ಲೇಖ (03) ರಲ್ಲಿ ವೈದ್ಯಕೀಯ ಕಾಲೇಜಿನ ಕಾಮಗಾರಿ ಪೂರ್ಣಗೊಳ್ಳುವವರೆಗೆ ಈಗಾಗಲೇ ಚಿತ್ರದುರ್ಗ ವೈದ್ಯಕೀಯ ಕಾಲೇಜಿಗೆ ಪೂರೈಸಿರುವ ಕೊಠಡಿಗಳೊಂದಿಗೆ ಇನ್ನೂ ಹೆಚ್ಚುವರಿಯಾಗಿ **04 ಬೋಧನಾ ಕೊಠಡಿಗಳು ಹಾಗೂ ಪ್ರಯೋಗ ಶಾಲೆಗೆ 04 ಕೊಠಡಿಗಳು ಒಟ್ಟು 08 ಕೊಠಡಿಗಳನ್ನು** ಕೋರಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಸರ್ಕಾರಕ್ಕೂ ಸಲ್ಲಿಸಿರುತ್ತಾರೆ.

ವೈದ್ಯಕೀಯ ಕಾಲೇಜಿನ ಕೋರಿಕೆಗೆ ಸಂಬಂಧಿಸಿದಂತೆ, ಉಲ್ಲೇಖ(04)ರ ಸರ್ಕಾರದ ಪತ್ರದಲ್ಲಿ ಸದರಿ ಒಪ್ಪಂದವನ್ನು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ದಿನಾಂಕ:11.08.2027 ರವರೆಗೆ 02 ವರ್ಷಗಳವರೆಗೆ ಪರಿಷ್ಕರಿಸಿ ಮುಂದುವರೆಸಲು ಹಾಗೂ ಹೆಚ್ಚುವರಿಯಾಗಿ 04 ಬೋಧನಾ ಕೊಠಡಿ, 04 ಪ್ರಯೋಗಶಾಲಾ ಒಟ್ಟು 08 ಹೆಚ್ಚುವರಿ ಕೊಠಡಿಗಳನ್ನು ನೀಡುವ ಬಗ್ಗೆ, ವಿಶ್ವವಿದ್ಯಾನಿಲಯ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸ್ಪಷ್ಟವಾದ ಅಭಿಪ್ರಾಯವನ್ನು ನೀಡುವಂತೆ ತಿಳಿಸಿರುತ್ತಾರೆ.

ವೈದ್ಯಕೀಯ ಕಾಲೇಜನ್ನು 02 ವರ್ಷಗಳ ಅವಧಿಗೆ ಮುಂದುವರೆಸಲು, **ಹೆಚ್ಚುವರಿ 08 ಕೊಠಡಿಗಳನ್ನು ನೀಡುವ ಬಗ್ಗೆ** ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅಭಿಪ್ರಾಯಕ್ಕಾಗಿ ಸಲ್ಲಿಸಿದೆ.

**ಮುಂದುವರೆದಿದೆ...**

ಕುಲಸಚಿವರು

ಕುಲಪತಿಗಳು

ವಿವರಣೆ

- **ಶ್ರೀಮತಿ ಪ್ರೇಮ ಜಿ.ಕೆ. ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ** – ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ ಚಿತ್ರದುರ್ಗದಲ್ಲಿರುವ ಕೊಠಡಿಗಳನ್ನು ವೈದ್ಯಕೀಯ ಕಾಲೇಜು & ಸಂಶೋಧನಾ ಸಂಸ್ಥೆ (CMC&RI), ಚಿತ್ರದುರ್ಗ ಕಾಲೇಜಿಗೆ 02 ವರ್ಷಗಳ ಅವಧಿಗೆ ಮುಂದುವರೆಸಲು ಹಾಗೂ ಹೆಚ್ಚುವರಿ 08 ಕೊಠಡಿಗಳನ್ನು ವೈದ್ಯಕೀಯ ಕಾಲೇಜಿಗೆ ನೀಡಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು, ಈ ಹಿಂದೆ 08 ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದವು. ಆದರೆ, ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಕೇವಲ 04 ವಿಭಾಗಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಕಾರಣ ಸೂಕ್ತ ರೀತಿಯಲ್ಲಿ ಪಾಠ ಪ್ರವಚನಗಳು ನಡೆಯದೇ ಇರುವುದು ಹಾಗೂ ಖಾಯಂ ಅಧ್ಯಾಪಕರ ನಿಯೋಜನೆಗೆ ಬದಲಾಗಿ Rotaion Base ಆಧಾರದ ಮೇಲೆ ಅಧ್ಯಾಪಕರುಗಳು ಕಾರ್ಯನಿರ್ವಹಿಸುತ್ತಿರುವುದರಿಂದ ವಿದ್ಯಾರ್ಥಿಗಳ ಪ್ರವೇಶಾತಿಯು ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ ಚಿತ್ರದುರ್ಗದಲ್ಲಿ ಕಡಿಮೆಯಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾ ಖಾಯಂ ಅಧ್ಯಾಪಕರ ನಿಯೋಜನೆಗೆ ಬದಲಾಗಿ ಸ್ನಾತಕೋತ್ತರ ಕೇಂದ್ರಕ್ಕೆಂದೇ ನೇಮಕಾತಿಯಾಗಿರುವ ಅಧ್ಯಾಪಕರುಗಳನ್ನು ನೇಮಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ 2025-26ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕಟಣೆಯಲ್ಲಿ Application for P.G. Centre ಹಾಗೂ Application for Main Campus ಎಂಬಂತೆ ಬೇರೆ ಬೇರೆಯಾಗಿ ಪ್ರಕಟಣೆ ಹೊರಡಿಸಿ ಶೇ.10% ಪ್ರವೇಶ ಶುಲ್ಕವನ್ನು ಹೆಚ್ಚಿಸದೇ 2024-25 ನೇ ಸಾಲಿನ ಶುಲ್ಕವನ್ನೇ ಮುಂದುವರೆಸಬೇಕೆಂದು ಸಭೆಗೆ ತಿಳಿಸಿದರು. ಮುಂದುವರೆದು, ಸ್ನಾತಕೋತ್ತರ ಕೇಂದ್ರ. ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿರುವ ವಸತಿ ನಿಲಯಗಳಲ್ಲಿ ಊಟದ ಗುಣಮಟ್ಟವನ್ನು ಕಾಪಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.
- **ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ** – ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ ಚಿತ್ರದುರ್ಗದಲ್ಲಿರುವ ಕೊಠಡಿಗಳನ್ನು ವೈದ್ಯಕೀಯ ಕಾಲೇಜು & ಸಂಶೋಧನಾ ಸಂಸ್ಥೆ (CMC&RI), ಚಿತ್ರದುರ್ಗ ಕಾಲೇಜಿಗೆ 02 ವರ್ಷಗಳ ಅವಧಿಗೆ ಮುಂದುವರೆಸಲು ಹಾಗೂ ಹೆಚ್ಚುವರಿ 08 ಕೊಠಡಿಗಳನ್ನು ವೈದ್ಯಕೀಯ ಕಾಲೇಜಿಗೆ ನೀಡಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿ, 2025-26 ಸಾಲಿಗೆ ಪ್ರವೇಶಾತಿ ಹೆಚ್ಚಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಬಸ್ ನಿಲುಗಡೆ ವ್ಯವಸ್ಥೆಯನ್ನು ಕಲ್ಪಿಸುವುದಾಗಿ ಸಭೆಗೆ ತಿಳಿಸಿದರು ಹಾಗೂ ಖಾಯಂ ಅಧ್ಯಾಪಕರ ನಿಯೋಜನೆಗೆ ಬದಲಾಗಿ ಸ್ನಾತಕೋತ್ತರ ಕೇಂದ್ರಕ್ಕೆಂದೇ ನೇಮಕಾತಿಯಾಗಿರುವ ಅಧ್ಯಾಪಕರುಗಳನ್ನು ನೇಮಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.
- **ಡಾ. ಬಿ. ಎನ್. ಉಮೇಶ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ** – ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸಲು Skill Devolopment Course, Job Oriented Course ಹಾಗೂ Placement ಗೆ ಸಂಬಂಧಿಸಿದಂತೆ ಕೋರ್ಸ್‌ಗಳನ್ನು ಪ್ರಾರಂಭ ಮಾಡುವುದರಿಂದ ಪ್ರವೇಶಾತಿಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ UPS Battery ಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು.

ಕುಲಸಚಿವರು

ಕುಲಪತಿಗಳು

- **ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಮಾತನಾಡಿ** – 2025-26ನೇ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿಯಾಗಿ 05 ರಿಂದ 08 ವಿಭಾಗಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿರುವ ಬಗ್ಗೆ ಹಾಗೂ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗಕ್ಕೆ ನೇಮಕಾತಿ ಹೊಂದಿರುವ ಪ್ರಾಧ್ಯಾಪಕರುಗಳನ್ನು ನಿಯೋಜಿಸುವ ಬಗ್ಗೆ ಹಾಗೂ 2025-26ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕಟಣೆಯಲ್ಲಿ Application for P.G. Centre ಹಾಗೂ Application for Main Campus ಎಂಬಂತೆ ಪ್ರತ್ಯೇಕವಾಗಿ ಅರ್ಜಿ ಹೊರಡಿಸಲು ಕ್ರಮಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಇಲ್ಲಿಗೆ ಪ್ರವೇಶಾತಿ ಬಯಸಿ ಬರುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ಹೆಚ್ಚಿಸದೇ 2024-25 ನೇ ಸಾಲಿನ ಶುಲ್ಕವನ್ನೇ ಮುಂದುವರೆಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ UPS Battery ಗಳನ್ನು ಅಳವಡಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು ಹಾಗೂ ವಸತಿ ನಿಲಯಗಳಲ್ಲಿ ಊಟದ ಗುಣಮಟ್ಟವನ್ನು ಕಾಪಾಡುವ ಕುರಿತಂತೆ ಮುಂದಿನ ದಿನಗಳಲ್ಲಿ ಟೆಂಡರ್ ಕರೆದಾಗ ಈ ಬಗ್ಗೆ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**:: ನಿರ್ಣಯ ::**

ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದ ತರಗತಿ ಕೊಠಡಿಗಳನ್ನು ವೈದ್ಯಕೀಯ ಕಾಲೇಜು & ಸಂಶೋಧನಾ ಸಂಸ್ಥೆ (CMC&RI), ಚಿತ್ರದುರ್ಗ ಕಾಲೇಜಿಗೆ 02 ವರ್ಷಗಳ ಅವಧಿಗೆ ಮುಂದುವರೆಸುವ ಕುರಿತು ಹಾಗೂ 04 ಕೊಠಡಿಗಳನ್ನು ಹೆಚ್ಚುವರಿಯಾಗಿ ನೀಡುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಬಳಿಕ 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಈ ಬಗ್ಗೆ ಕ್ರಮಕೈಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಸ್ನಾತಕೋತ್ತರ ಕೇಂದ್ರ. ಜಿ.ಆರ್. ಹಳ್ಳಿ ಚಿತ್ರದುರ್ಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕೆಳಕಂಡ ಅಂಶಗಳ ಕುರಿತು ಕ್ರಮವಹಿಸಲು ಸಭೆಯು ನಿರ್ಣಯಿಸಿತು

1. ಖಾಯಂ ಅಧ್ಯಾಪಕರ ನಿಯೋಜನೆಗೆ ಬದಲಾಗಿ ಸ್ನಾತಕೋತ್ತರ ಕೇಂದ್ರಕ್ಕೆಂದೇ ನೇಮಕಾತಿಯಾಗಿರುವ ಖಾಯಂ ಅಧ್ಯಾಪಕರುಗಳನ್ನು ನೇಮಿಸುವುದು.
2. 2025-26ನೇ ಶೈಕ್ಷಣಿಕ ಸಾಲಿನಲ್ಲಿ 5 ರಿಂದ 8 ವಿಭಾಗಗಳನ್ನು ಆರಂಭಿಸಲು ಕ್ರಮಕೈಗೊಳ್ಳುವುದು.
3. ಬಸ್ ವ್ಯವಸ್ಥೆಗೆ ಸಂಬಂಧಿಸಿದಂತೆ ಚಿತ್ರದುರ್ಗದ ಜಿಲ್ಲಾಧಿಕಾರಿಗಳಿಗೆ ಪತ್ರಿಸುವುದು.
4. ವಸತಿ ನಿಲಯಗಳ ಊಟದ ಟೆಂಡರ್‌ನಲ್ಲಿ ಊಟೋಪಚಾರದ ಗುಣಮಟ್ಟವನ್ನು ಕಾಪಾಡಲು ಕ್ರಮಕೈಗೊಳ್ಳುವುದು.
5. Appliaction for P.G. Course in Main Campus ಮತ್ತು Application for P.G. Course in P.G. Centre, Chitradurga ಎಂದು ಪ್ರಕಟಣೆಯಲ್ಲಿ ಪ್ರತ್ಯೇಕವಾಗಿ ಅರ್ಜಿಗಳನ್ನು ಪ್ರಕಟಿಸುವುದು.
6. ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿರುವ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಹೆಚ್ಚಿಸದೇ ಈ ಹಿಂದಿನ ಸಾಲಿನ (2024-25) ಪ್ರವೇಶ ಶುಲ್ಕವನ್ನೇ ಮುಂದುವರೆಸುವುದು.
7. ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ UPS Battery ಗಳನ್ನು ಅಳವಡಿಸಲು ಕ್ರಮಕೈಗೊಳ್ಳುವುದು.
8. ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸಲು Skill Devolopment Course, Job Oriented Course ಹಾಗೂ Placement ಗೆ ಸಂಬಂಧಿಸಿದಂತೆ ಕೋರ್ಸ್‌ಗಳನ್ನು ಪ್ರಾರಂಭಿಸಲು ಡಾ. ಬಿ. ಎನ್. ಉಮೇಶ್, ಮಾನ್ಯ ಸಿಂಡಿಕೇಟ್ ಸದಸ್ಯರನ್ನೊಳಗೊಂಡತೆ ಉಪ ಸಮಿತಿಯನ್ನು ರಚಿಸಲು ಸಭೆಯು ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 30 | |
|---|---|
| ವಿಷಯ ಸಂಖ್ಯೆ: | ಸಿಂ.07(j)/(07/25) |

**–ಃಟಿಪ್ಪಣಿಃ–**

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ Art Gallery ಗೆ 2'X2' LED Panel Light ಗಳನ್ನು ಸರಬರಾಜು ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ Art Gallery ಯಲ್ಲಿ ಹಳೆಯದಾದ ಹಾಳಾದ CFL Light ಗಳನ್ನು ತೆಗೆದು ಹೊಸದಾಗಿ 2'X2' LED Panel Light ಗಳನ್ನು ಖರೀದಿಸಿ ಅಳವಡಿಸುವ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.1.50ಲಕ್ಷ ಮಿತಿಯೊಳಗೆ ಕೈಗೊಂಡಿದ್ದು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯದ ಆರ್ಟ್ ಗ್ಯಾಲರಿಗೆ ಹೊಸದಾಗಿ 2'X2' LED Panel Light ಗಳನ್ನು ಅಳವಡಿಸುವ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.1.50ಲಕ್ಷ ಮಿತಿಯೊಳಗೆ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 31 | |
|---|---|
| ವಿಷಯ ಸಂಖ್ಯೆ: | ಸಿಂ.07(k)/(07/25) |

## –:ಟಿಪ್ಪಣಿ:–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಪ್ರಸಾರಂಗ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸುವ ಕುರಿತು.

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಕೆಫೆಟೆರಿಯಾ ಕಟ್ಟಡದಲ್ಲಿ ಪ್ರಸಾರಾಂಗ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ ಕಾಮಗಾರಿಯನ್ನು ಹೆಚ್ಚುವರಿಯಾಗಿ ಮಾಡಿಸುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.2.70 ಲಕ್ಷ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಕೆಫೆಟೆರಿಯಾ ಕಟ್ಟಡದಲ್ಲಿ ಪ್ರಸಾರಾಂಗ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ ಕಾಮಗಾರಿಯನ್ನು ಹೆಚ್ಚುವರಿಯಾಗಿ ರೂ.2.70 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 32 | |
|---|---|
| ವಿಷಯ ಸಂಖ್ಯೆ: | ಸಿಂ.07(l)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ Modular Lab ಪ್ರಯೋಗಾಲಯ ನಿರ್ಮಾಣ ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ಒಂದು ಪ್ರಯೋಗಾಲಯ ನಿರ್ಮಾಣ ಮಾಡಿದ್ದು ಈಗ ಹೆಚ್ಚುವರಿಯಾಗಿ ಇನ್ನೊಂದು Modular Lab ಪ್ರಯೋಗಾಲಯ ನಿರ್ಮಾಣ ಮಾಡಿಸುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅಪರಾಧಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ Modular Lab ನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 33 | |
|---|---|
| ವಿಷಯ ಸಂಖ್ಯೆ: | ಸಿಂ.07(m)/(07/25) |

## –:ಟಿಪ್ಪಣಿ:–

ವಿಷಯಃ **KRIDL, Chitradurga** - ಇವರಿಗೆ ಬಾಕಿ ಅನುದಾನ ಪಾವತಿಸುವ ಕುರಿತು

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ ಚಿತ್ರದುರ್ಗ ಆವರಣದಲ್ಲಿ (ಕ್ರ.ಸಂ.01 ರಿಂದ 03) ಕೆ.ಆರ್.ಐ.ಡಿ.ಎಲ್. ಚಿತ್ರದುರ್ಗ ವಿಭಾಗ, ಚಿತ್ರದುರ್ಗ ಇವರಿಂದ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಸಂಸ್ಥೆಯವರು ಕಾಮಗಾರಿಗಳನ್ನು ಪೂರ್ಣಗೊಳಿಸಿ, ಹಸ್ತಾಂತರಿಸಿರುತ್ತಾರೆ. ಆದ್ದರಿಂದ, ಬಾಕಿ ಅನುದಾನ ಬಿಡುಗಡೆಗೊಳಿಸುವಂತೆ ಪದೇ ಪದೇ ವಿಶ್ವವಿದ್ಯಾನಿಲಯಕ್ಕೆ ಪತ್ರಿಸಿರುತ್ತಾರೆ. ಕಾಮಗಾರಿಗಳನ್ನು ಪೂರ್ಣಗೊಳಿಸಿ ಸರಿಸುಮಾರು ಐದು ವರ್ಷ ಮೇಲ್ಪಟ್ಟಿದು ಸದರಿ ಸಂಸ್ಥೆಯವರಿಗೆ ಬಾಕಿ ಅನುದಾನ ಬಿಡುಗಡೆಗೊಳಿಸುವ ಕುರಿತು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**KRIDL,Chitradurga ಇವರಿಗೆ ಬಾಕಿ ಅನುದಾನ ಪಾವತಿಸಬೇಕಾದ ಮೊತ್ತ.**

| Sl. No. | Name of work | Estimate cost (Rs. in Lakhs) | Grants utilized (Rs. in Lakhs) | Grants Balance (Rs. in Lakhs) |
|---|---|---|---|---|
| 1 | Construction of Kitchen and Dining Block including Recreation & GYM Room(Boys) to Davangere University at Guddadarangavvanahalli in Chitradurga Tq. | 176.00 | 171.75 | 4.25 |
| 2 | Construction work of Post Graduate Boys Hostel for Davangere Univesrity at Guddadarangavvanahalli in Chitradurga Tq. (Third Floor) | 123.61 | 120.90 | 2.71 |
| 3 | Construction work of Post Graduate Girls Hostel for Davangere Univesrity at Guddadarangavvanahalli in Chitradurga Tq. (Third Floor) | 123.61 | 120.00 | 3.61 |
| | **Grand Total Rs:** | **423.22** | **412.65** | **10.57** |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ ಚಿತ್ರದುರ್ಗ ಆವರಣದಲ್ಲಿ ಈ ಮೇಲ್ಕಂಡ ಪಟ್ಟಿಯಲ್ಲಿರುವಂತೆ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಚಿತ್ರದುರ್ಗ ವಿಭಾಗ, ಚಿತ್ರದುರ್ಗ ಇವರು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಿ ಸರಿಸುಮಾರು ಐದು ವರ್ಷ ಮೇಲ್ಪಟ್ಟಿರುವುದರಿಂದ ಸದರಿಯವರಿಗೆ ನೀಡಬೇಕಾದ ಬಾಕಿ ಅನುದಾನ ರೂ.10.57 ಲಕ್ಷಗಳನ್ನು ಕೆ.ಆರ್.ಐ.ಡಿ.ಎಲ್. ಚಿತ್ರದುರ್ಗ ವಿಭಾಗ, ಚಿತ್ರದುರ್ಗ ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 34 | |
|---|---|
| ವಿಷಯ ಸಂಖ್ಯೆ: | ಸಿಂ.07(n)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹೊಸದಾಗಿ UPS Battery ಗಳನ್ನು ಸರಬರಾಜು ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹೊಸದಾಗಿ UPS Battery ಗಳನ್ನು ರೂ.1.05 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಖರೀದಿಸಿ ಅಳವಡಿಸಲಾಗಿರುವ ಕುರಿತು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹಕ್ಕೆ ಹೊಸದಾಗಿ UPS Battery ಗಳನ್ನು ರೂ.1.05 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಖರೀದಿಸಿ ಅಳವಡಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 35 | |
|---|---|
| ವಿಷಯ ಸಂಖ್ಯೆ: | ಸಿಂ.07(ಂ)/(07/25) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಆವರಣದಲ್ಲಿ UPS Battery ಗಳಿಗೆ Electrical Wiring ಮತ್ತು ವಿದ್ಯುತ್ ಸಾಮಗ್ರಿಗಳನ್ನು ಸರಬರಾಜು ಮಾಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗ ಆವರಣದಲ್ಲಿ 75KW Solar Plant ಗಳನ್ನು ಮತ್ತು UPS Battery ಗಳನ್ನು BESCOM ವತಿಯಿಂದ ಉಚಿತವಾಗಿ ಅಳವಡಿಸಿರುತ್ತಾರೆ. ಆದರೆ, ವಿಭಾಗಗಳಿಗೆ UPS Battery ಗಳಿಂದ ವಿದ್ಯುತ್ ಉಪಯೋಗಿಸಿಕೊಳ್ಳಲು Internal Wiring ಮತ್ತು ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಿ ಅಳವಡಿಸುವ ಅವಶ್ಯಕತೆ ಇದ್ದು, ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗ ಆವರಣದಲ್ಲಿ 75KW Solar Plant ಗಳನ್ನು ಮತ್ತು UPS Battery ಗಳನ್ನು BESCOM ವತಿಯಿಂದ ಉಚಿತವಾಗಿ ಅಳವಡಿಸಿರುವುದರಿಂದ ವಿಭಾಗಗಳಿಗೆ UPS Battery ಗಳಿಂದ ವಿದ್ಯುತ್ ಉಪಯೋಗಿಸಿಕೊಳ್ಳಲು Internal Wiring ಮತ್ತು ವಿದ್ಯುತ್ ಸಾಮಗ್ರಿಗಳನ್ನು ದರಪಟ್ಟಿ ಆಧಾರದ ಮೇಲೆ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 36 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(07/25) |

## –ಃಟಿಪ್ಪಣಿಃ–

**ವಿಷಯಃ ಶ್ರೀ ಎಲ್. ಕೆ. ಹನುಮಂತಚಾರ್, ಅಧ್ಯಾಪಕರು, ಇವರು ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಠೇವಣಿ ಇಡುವ ಕುರಿತು.**

ಉಲ್ಲೇಖ:
1. ಎಲ್ ಕೆ ಹನುಮಂತಚಾರ್, ಹಳೆಯ ವಿದ್ಯಾರ್ಥಿ ದೃಶ್ಯಕಲಾ ಮಹಾವಿದ್ಯಾಲಯ ದಾವಣಗೆರೆ, ಇವರು ಮನವಿ ಪತ್ರದ ದಿನಾಂಕ:04.06.2025
2. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ ಇವರ ಪತ್ರ ಸಂಖ್ಯೆ:ವಿದೃಕಮ/ಮಾಸನಿ/ 2024–25, ದಿನಾಂಕ:10.06.2025.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.06.2025

*****

ಶ್ರೀ ಎಲ್ ಕೆ ಹನುಮಂತಚಾರ್, ಅಧ್ಯಾಪಕರಾಗಿ ಸುಮಾರು 35 ವರ್ಷಗಳ ಕಾಲ ಅನ್ವಯಿಕ ಕಲಾ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ ಹಾಗೂ ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು ಇವರು ರೂ.1,00,000/– ಗಳನ್ನು ದತ್ತಿ ನಿಧಿಯನ್ನು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಠೇವಣಿ ಇಡುವಂತೆ ಕೋರಿರುತ್ತಾರೆ. ಸದರಿ ಮೊತ್ತವನ್ನು ಠೇವಣಿ ರೂಪದಲ್ಲಿ ಇಟ್ಟು ಬರುವ ಬಡ್ಡಿ ಮೊತ್ತವನ್ನು ಸಂಬಂಧಿಸಿದ ಉದ್ದೇಶಕ್ಕೆ ಬಳಸುವ ಕುರಿತು ಚರ್ಚಿಸಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಶ್ರೀ ಎಲ್ ಕೆ ಹನುಮಂತಚಾರ್, ಅಧ್ಯಾಪಕರು ಹಾಗೂ ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು, ಇವರು ದೇಣಿಗೆಯಾಗಿ ನೀಡಿರುವ ರೂ.1,00,000/– ಗಳ ದತ್ತಿ ನಿಧಿಯನ್ನು ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿಟ್ಟು ಹಾಗೂ ಅದರಿಂದ ಬರುವ ಬಡ್ಡಿ ಮೊತ್ತದಿಂದ ದೃಶ್ಯಕಲಾ ಮಹಾವಿದ್ಯಾಲಯದ ಅನ್ವಯಿಕ ಕಲಾ ವಿಷಯಕ್ಕೆ ಸಂಬಂಧಿಸಿದಂತೆ **"ಶ್ರೀ ಎಲ್.ಕೆ. ಹನುಮಂತಚಾರ್ ದತ್ತಿ ಉಪನ್ಯಾಸ"** ಇವರ ಹೆಸರಿನಲ್ಲಿ ಪ್ರತಿ ವರ್ಷ ಫೆಬ್ರವರಿ ಮಾಹೆಯಲ್ಲಿ ಕಾರ್ಯಕ್ರಮ ಆಯೋಜಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದುವರೆದು, ಸದರಿ ವಿಷಯವನ್ನು ಮುಂಬರುವ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 37 | |
|---|---|
| ವಿಷಯ ಸಂಖ್ಯೆ: | ಸಿಂ.08(b)/(07/25) |

**–ಃಟಿಪ್ಪಣಿಃ–**

**ವಿಷಯಃ 2025–26ನೇ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಗೆ ಶುಲ್ಕ ಹೆಚ್ಚಳದೊಂದಿಗೆ ಪ್ರಕಟಣೆ ಹೊರಡಿಸುವ ಕುರಿತು.**

*****

ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ಕಾಲೇಜುಗಳಿಂದ ವಿವಿಧ ಪದವಿ ಕೋರ್ಸುಗಳಿಂದ 2025–26ನೇ ಸಾಲಿಗೆ ಪ್ರವೇಶ ಪ್ರಕಟಣೆಯನ್ನು ಹೊರಡಿಸಬೇಕಾಗಿರುತ್ತದೆ. ಈ ಸಂಬಂಧ ಕಳೆದ ಸಾಲಿನ ಶುಲ್ಕಕ್ಕೆ ಶೇ.10% ರಷ್ಟು ಶುಲ್ಕ ಹೆಚ್ಚಿಸಿ ಪ್ರವೇಶಾತಿಗೆ ಪ್ರಕಟಣೆ ಹೊರಡಿಸಲು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

2025–26ನೇ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಗೆ ಪ್ರಕಟಣೆ ಹೊರಡಿಸಲು ಕಳೆದ ಸಾಲಿನ ಶುಲ್ಕಕ್ಕೆ ಶೇಕಡ 10% ರಷ್ಟು ಶುಲ್ಕವನ್ನು ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ ಕೋರ್ಸುಗಳಿಗೆ ಹೊರತುಪಡಿಸಿ ಕೇಂದ್ರ ಕಛೇರಿ ಕೋರ್ಸುಗಳಿಗೆ ಮಾತ್ರ ಹೆಚ್ಚಿಸಲು ನಿರ್ಣಯಿಸಲಾಯಿತು. ಹಾಗೆಯೇ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಹಾಗೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಬೇರೆ ಬೇರೆಯಾಗಿ Appliaction for P.G. Course, Main Campus ಮತ್ತು Application for P.G. Course, P.G. Centre, Chitradurga ಎಂದು ಪ್ರತ್ಯೇಕವಾಗಿ ಅರ್ಜಿಗಳನ್ನು ಕರೆಯಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 38 | |
|---|---|
| ವಿಷಯ ಸಂಖ್ಯೆ: | ಸಿಂ.09(a)/(07/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ವಿವಿಧ ನಿಕಾಯಗಳ (ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಶಿಕ್ಷಣ) ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*****

ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನ್ವಯ 2025–26ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಸ್ನಾತಕ ಪದವಿಯ 3 ಮತ್ತು 4ನೇ ಸೆಮಿಸ್ಟರ್‌ಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸಭೆಯನ್ನು ಕರೆದು ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದು ಸದರಿ ಪಠ್ಯಕ್ರಮ ಹಾಗೂ ನಡಾವಳಿಗಳನ್ನು ದಿನಾಂಕ:03.06.2025 ರಂದು ವಿಶ್ವವಿದ್ಯಾನಿಲಯದಲ್ಲಿ ವಿವಿಧ ನಿಕಾಯಗಳ (ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಶಿಕ್ಷಣ) ಸಭೆಯನ್ನು ಏರ್ಪಡಿಸಿ ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಪಠ್ಯಕ್ರಮ ಹಾಗೂ ನಡಾವಳಿಗಳನ್ನು ದಿನಾಂಕ:10.06.2025ರ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ತತ್ಸಂಬಂಧ, ಸದರಿ ನಡಾವಳಿಗಳನ್ನು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನ್ವಯ 2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ 3 ಮತ್ತು 4ನೇ ಸೆಮಿಸ್ಟರ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ:03.06.2025 ರಂದು ವಿಶ್ವವಿದ್ಯಾನಿಲಯದಲ್ಲಿ ವಿವಿಧ ನಿಕಾಯಗಳ (ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಶಿಕ್ಷಣ) ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳ ಕುರಿತು ಚರ್ಚಿಸಿ ಸಭೆಯು ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                    ಕುಲಪತಿಗಳು

| ಪರೀಕ್ಷಾಂಗ ವಿಭಾಗ – 39 | |
| --- | --- |
| ವಿಷಯ ಸಂಖ್ಯೆ: | ಸಿಂ.10(a)/(07/25) |

## –:ಟಿಪ್ಪಣಿ:–

ವಿಷಯ: ಜನವರಿ/ಫೆಬ್ರವರಿ–2025ರ ಮಾಹೆಯ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಯ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯ" ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.

*****

ವಿಶ್ವವಿದ್ಯಾನಿಲಯದಲ್ಲಿ ಜನವರಿ/ಫೆಬ್ರವರಿ–2025ರ ಮಾಹೆಯಲ್ಲಿ ನಡೆದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳನ್ನು ದಿನಾಂಕ:20.05.2025 ರಂದು ನಡೆದ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯು" ವಿಚಾರಣೆ ನಡೆಸಿರುತ್ತದೆ. ಸದರಿ ಸಮಿತಿಯ ಸಭಾ ನಡಾವಳಿಗಳನ್ನು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ಜನವರಿ/ಫೆಬ್ರವರಿ–2025ರ ಮಾಹೆಯಲ್ಲಿ ನಡೆದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ದಿನಾಂಕ:20.05.2025 ರಂದು ನಡೆದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯ ಸಭಾ ನಡಾವಳಿಗಳ ಕುರಿತು ಚರ್ಚಿಸಿ ಸಭೆಯು ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 40 | |
|---|---|
| ವಿಷಯ ಸಂಖ್ಯೆ: | ಸಿಂ.10(b)/(07/25) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ವಿವಿಧ ಪರೀಕ್ಷಾ ಸಂಭಾವನೆ ಭತ್ಯೆ ದರಗಳನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ:
1. ಸಂಯೋಜಿತ ಕಾಲೇಜುಗಳ ಪಾಂಶುಪಾಲರು/ಅಧ್ಯಾಪಕ ಸಂಘಟನೆಗಳ ಮನವಿ ಪತ್ರಗಳು.
2. ಸಂಖ್ಯೆ:ದಾವಿ:ಪವಿ:ಲೆ.ಪ:682025–26/802, ದಿನಾಂಕ:19.06.2025
3. ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿ ಸಭೆಯ ದಿನಾಂಕ:03.07.2025.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.05.2025

*****

ವಿಶ್ವವಿದ್ಯಾನಿಲಯದಲ್ಲಿ ವಿವಿಧ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಅಧ್ಯಾಪಕರು/ ಅಧ್ಯಾಪಕೇತರ ಸಿಬ್ಬಂದಿಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಸಂಭಾವನೆ, ದಿನಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ಕಳೆದ 7–8 ವರ್ಷಗಳಿಂದ ಪರಿಷ್ಕರಣೆ ಮಾಡಿರುವುದಿಲ್ಲ. ಈ ಸಂಬಂಧವಾಗಿ, ಪ್ರಸ್ತುತವಿರುವ ದರಗಳನ್ನು ಪರಿಷ್ಕರಿಸುವಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ ಪಾಂಶುಪಾಲರು ಹಾಗೂ ವಿವಿಧ ವಿಷಯಗಳ ಅಧ್ಯಾಪಕರುಗಳ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಉಲ್ಲೇಖಿತ (1)ರಲ್ಲಿ ಮನವಿಗಳನ್ನು ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಉಲ್ಲೇಖ (2)ರ ಪತ್ರದಲ್ಲಿ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪರೀಕ್ಷಾ ಸಂಭಾವನೆ ದರಗಳ ಪರಿಷ್ಕರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ:03.07.2025 ರಂದು ಸಭೆ ನಡೆಸಿ, ರಾಜ್ಯದ ಇತರೆ ವಿಶ್ವವಿದ್ಯಾನಿಲಯದಲ್ಲಿ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಪಾವತಿಸುತ್ತಿರುವ ದರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಅನುಬಂಧ–1 ರಲ್ಲಿ ನಮೂದಿಸಲಾಗಿರುವಂತೆ ಪರೀಕ್ಷಾ ಕಾರ್ಯಗಳ ಸಂಭಾವನೆ, ದಿನಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ಪರಿಷ್ಕರಣೆ ಮಾಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಈ ಹಿನ್ನೆಲೆಯಲ್ಲಿ, ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ಶಿಪಾರಸ್ಸು ಮಾಡಿ ಸಲ್ಲಿರುವ ಸಂಭಾವನೆ, ದಿನಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಿ ಸಲ್ಲಿಸಿರುವ ವರದಿಯನ್ನು ದಿನಾಂಕ:04.07.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ಅನುಬಂಧ–1

**ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳ ಸಂಭಾವನೆ/ ದಿನಭತ್ಯೆ ಹಾಗು ಇತರೆ ದರಗಳನ್ನು ಪರಿಷ್ಕರಣೆ ಮಾಡಿದ ವಿವರ ಪಟ್ಟಿ**

| Sl. No | Description | Exiting | Revised |
|---|---|---|---|
| 1 | **VALUATION DA:**<br>1. DA Per Day External<br>2. Local Conveyance<br>3. Answer Scripts Valuation/Review Duration: 03 hrs & above | <br>1100/-<br>850/-<br>20/- | <br>1200/-<br>950<br>22/- |

ಮುಂದುವರೆದಿದೆ...

ಕುಲಸಚಿವರು ಕುಲಪತಿಗಳು

| | | | |
|---|---|---|---|
| 2 | PRACTICAL EXAMINATION:<br>1. DA Per Day External<br>2. Local Conveyance | 450/-<br>300/- | 550/-<br>350/- |
| 3 | **SQUAD :**<br>DA Per Day | 800/- | 900/- |
| 4 | **OBSERVER:**<br>1. DA Per Day External<br>2. Local Conveyance | 550/-<br>300/- | 650/-<br>400/- |
| 5 | Remuneration to Revaluation/ Third/ Challenge Valuation per Script | 22/- | 25/- |
| 6 | **CODING CENTRE :**<br>Bundle Receiving, Subject Wise Arrangement, Coding, Transporting to Valuation Centre | 1. Rs.0.40/-(Attenders/ Driver/Peon)<br>2. Rs.0.20/- Supervisory Staff | 1. Rs.0.60/-(Attenders/ Driver/Peon)<br>2. Rs.0.30/- Supervisory Staff |
| 7 | **VALUATION CENTRE:**<br>1. Data Entry Operator for Marks Entry.<br>2. Attenders | --<br>Rs.100/- Per day | 1. Rs.500/- for 100 "A" Form Entry/day<br>2. Rs.250/- for 50 "A" Form Entry (Half Day)<br>Rs.125/-Per day. |
| 8 | Paper wise arrangement of Question paper for printing and route wise arrangement for distribution of Question Paper. Less than 30 Paper is considered for minimum. | Rs.6=00 per paper Subject to minimum of Rs.200/- | Rs.10=00 per paper Subject to minimum of Rs.300/- |
| 9 | Xeroxing the Scheme of Valuation, pinning of Question papers and Board wise/ Paper wise/ Subject wise arrangement for valuation. | Rs.25/- Per Board | Rs.100/- Per Board |
| 10 | Distribution of Question Papers to Exam centres. | Rs.400/-D.A for Clerk and Driver (University Driver) in charge of the route & answer book/Stationery.<br>Rs.300/- for Attender per day. | Rs.500/-D.A for Clerk and Driver (University Driver) in charge of the route & answer book/Stationery.<br>Rs.400/- for Attender per day. |

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ವಿವಿಧ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಅಧ್ಯಾಪಕರು/ ಅಧ್ಯಾಪಕೇತರ ಸಿಬ್ಬಂದಿಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಸಂಭಾವನೆ, ದಿನಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ಪರಿಷ್ಕರಿಸುವ ಕುರಿತು ದಿನಾಂಕ:03.07.2025 ರಂದು ನಡೆದ ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಶಿಫಾರಸ್ಸು ಮಾಡಿರುವ ಅನುಬಂಧ–01 ರ ವರದಿಯನ್ನು ಪರಿಶೀಲಿಸಿ ಸುಧೀರ್ಘ ಚರ್ಚೆಯ ನಂತರ 2024–25ನೇ ಸಾಲಿನ ಜೂನ್/ಜುಲೈ ಪರೀಕ್ಷಾ ಕಾರ್ಯದಲ್ಲಿ ನಿರತರಾಗಿರುವ ಸಿಬ್ಬಂಧಿಗಳಿಗೆ ಜಾರಿ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 41 | |
|---|---|
| ವಿಷಯ ಸಂಖ್ಯೆ: | ಸಿಂ.10(c)/(07/25) |

## –:ಟಿಪ್ಪಣಿ:–

ವಿಷಯ: ಖಾಲಿ ಉತ್ತರ ಪತ್ರಿಕೆಗಳ ಖರೀದಿಯ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.

*****

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:03.07.2025ರಂದು ಮಧ್ಯಾಹ್ನ 03:30 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳ ವಿವರ ಮತ್ತು ಬಿಲ್‌ಗಳ ಮಾಹಿತಿಗಳನ್ನು ಸಮಿತಿಯು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ರೂ.99,90,000–00ಗಳನ್ನು (ರೂಪಾಯಿ ತೊಂಭತ್ತೊಂಭತ್ತು ಲಕ್ಷದ ತೊಂಭತ್ತು ಸಾವಿರ ಮಾತ್ರ) ಸಂಬಂಧಿಸಿದ ಸಂಸ್ಥೆಯವರಿಗೆ ಪಾವತಿ ಮಾಡಲು ಸಮಿತಿಯು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು.

<table>
<tr><th>ಕ್ರ ಸಂ.</th><th>ಸರಬರಾಜು ಸಂಸ್ಥೆಯ ಹೆಸರು</th><th>ವಿವರ</th><th>ಒಟ್ಟು ಹುಂಡಿ ಮೊತ್ತ</th></tr>
<tr><td>01</td><td>M/s Orient Press LTD, Bangalore</td><td>
<table>
<tr><th>Sl. No.</th><th>Bill No</th><th>Bill Date</th><th>Amount</th></tr>
<tr><td>01</td><td>TP/2526/0114</td><td>14.05.2025</td><td>8,32,500/-</td></tr>
<tr><td>02</td><td>TP/2526/0123</td><td>17.05.2025</td><td>8,32,500/-</td></tr>
<tr><td>03</td><td>TP/2526/0142</td><td>26.05.2025</td><td>33,30,000/-</td></tr>
<tr><td>04</td><td>TP/2526/0144</td><td>27.05.2025</td><td>49,95,000/-</td></tr>
<tr><td></td><td colspan="3">99,90,000=00</td></tr>
<tr><td colspan="4">Total Rs. (Rupees Ninety Nine Lakhs Ninety Thousand only)</td></tr>
</table>
</td><td>99,90,000=00</td></tr>
</table>

ಈ ಹಿನ್ನೆಲೆಯಲ್ಲಿ ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Orient Press Ltd., Bangalore – ಇವರಿಗೆ ರೂ.99,99,000–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಬೇಕಾಗಿರುವ ಪ್ರಾಯೋಗಿಕ ಮತ್ತು ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು M/s Orient Press LTD, Bangalore – ಇವರಿಂದ ಖರೀದಿಸಲಾಗಿದ್ದು, ಸದರಿ ಬಿಲ್ಲಿನ ಬಾಬ್ತು ರೂ. 99,90,000–00 ಗಳ ಬಿಲ್ಲುಗಳನ್ನು ದಿನಾಂಕ:03.07.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು ರೂ.99,90,000/– ಗಳನ್ನು M/s Orient Press LTD, Bangalore - ಇವರಿಗೆ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 42 | |
|---|---|
| ವಿಷಯ ಸಂಖ್ಯೆ: | ಸಿಂ.10(d)/(07/25) |

## –:ಟಿಪ್ಪಣಿ:–

ವಿಷಯ: ಖಾಲಿ ಪ್ರಾಯೋಗಿಕ ಉತ್ತರ ಪತ್ರಿಕೆಗಳ ಖರೀದಿಯ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.

*****

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:03.07.2025ರಂದು ಮಧ್ಯಾಹ್ನ 03:30 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಖಾಲಿ ಉತ್ತರ ಪತ್ರಿಕೆಗಳ ವಿವರ ಮತ್ತು ಬಿಲ್‌ಗಳ ಮಾಹಿತಿಗಳನ್ನು ಸಮಿತಿಯ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ರೂ.11,10,000–00ಗಳನ್ನು (ರೂಪಾಯಿ ಹನ್ನೊಂದು ಲಕ್ಷದ ಹತ್ತು ಸಾವಿರ ಮಾತ್ರ) ಸಂಬಂಧಿಸಿದ ಸಂಸ್ಥೆಯವರಿಗೆ ಪಾವತಿ ಮಾಡಲು ಸಮಿತಿಯು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು.

<table>
<tr><th>ಕ್ರ. ಸಂ.</th><th>ಸರಬರಾಜು ಸಂಸ್ಥೆಯ ಹೆಸರು</th><th>ವಿವರ</th><th>ಒಟ್ಟು ಹುಂಡಿ ಮೊತ್ತ</th></tr>
<tr><td>01</td><td>M/s Orient Press LTD, Bangalore</td><td>
<table>
<tr><th>Sl. No.</th><th>Bill No</th><th>Bill Date</th><th>Amount</th></tr>
<tr><td>01</td><td>TP/25-26/0099</td><td>04.06.2025</td><td>11,10,000/-</td></tr>
<tr><td></td><td colspan="3">11,10,000=00</td></tr>
<tr><td colspan="4">Total Rs. (Rupees Eleven Lakhs Ten Thousand only</td></tr>
</table>
</td><td>11,10,000=00</td></tr>
</table>

ಈ ಹಿನ್ನೆಲೆಯಲ್ಲಿ ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Orient Press Ltd., Bangalore – ಇವರಿಗೆ ರೂ.11,10,000–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:04.07.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಬೇಕಾಗಿರುವ ಖಾಲಿ ಪ್ರಾಯೋಗಿಕ ಉತ್ತರ ಪತ್ರಿಕೆಗಳನ್ನು M/s Orient Press LTD, Bangalore – ಇವರಿಂದ ಖರೀದಿಸಲಾಗಿದ್ದು, ಸದರಿ ಬಿಲ್ಲಿನ ಬಾಬ್ತು ರೂ. 11,10,000–00 ಗಳ ಬಿಲ್ಲುಗಳನ್ನು ದಿನಾಂಕ:03.07.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು ರೂ.11,10,000/– ಗಳನ್ನು M/s Orient Press LTD, Bangalore - ಇವರಿಗೆ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 43 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(07/25) |

## –:ಟಿಪ್ಪಣಿ:–

**ವಿಷಯಃ ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

*****

ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

| | |
|---|---|
| ವಿಷಯ 1 : | ದಾವಣಗೆರೆ ವಿಶ್ವವಿದ್ಯಾನಿಲಯದ ಗುಡ್ಡದ ರಂಗವ್ವನಹಳ್ಳಿ, ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳು, ಅಧ್ಯಾಪಕರು, ಗ್ರಂಥಾಲಯ, ಪ್ರಯೋಗಾಲಯ, ವಸತಿ ನಿಲಯ, ಕ್ಯಾಂಟೀನ್, ಸಾರಿಗೆ ವ್ಯವಸ್ಥೆ ಇವೆ ಮೊದಲಾದ ವಿಷಯಗಳಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡುವ ಬಗ್ಗೆ. |
| ನಿರ್ಣಯ: | ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. |
| ವಿಷಯ 2 : | ಸ್ನಾತಕೋತ್ತರ ಕೇಂದ್ರದಲ್ಲಿ ಈಗಿರುವ 04 ವಿಷಯಗಳ ಜೊತೆಗೆ ಇನ್ನೂ ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಗಣಿತಶಾಸ್ತ್ರ, ಆಹಾರ ತಂತ್ರಜ್ಞಾನ ಮೊದಲಾದ ಪ್ರಮುಖ ವಿಭಾಗಗಳನ್ನು ಆರಂಭಿಸುವ ಬಗ್ಗೆ. |
| ನಿರ್ಣಯ: | 2025–26ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿರುವ ಬಗ್ಗೆ ಮಾನ್ಯ ಕುಲಪತಿಗಳು ಮಾಹಿತಿಯನ್ನು ನೀಡಿದರು. |
| ವಿಷಯ 3 : | ಸ್ನಾತಕೋತ್ತರ ಪದವಿ ಪ್ರವೇಶದ ಸಂದರ್ಭದಲ್ಲಿ ಗುಡ್ಡದ ರಂಗವ್ವನಹಳ್ಳಿ ಸ್ನಾತಕೋತ್ತರ ಕೇಂದ್ರಕ್ಕೆ ಉಂಟುಮಾಡುತ್ತಿರುವ ಉದ್ದೇಶಪೂರ್ವಕ ತೊಡಕುಗಳನ್ನು ನಿವಾರಿಸುವ ಬಗ್ಗೆ. |
| ನಿರ್ಣಯ: | ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿ 04 ವಿಭಾಗಗಳನ್ನು ಹೆಚ್ಚುವರಿಯಾಗಿ ತೆರೆಯಲು ಕ್ರಮಕೈಗೊಳ್ಳಲಾಗುವುದು ಹಾಗೂ ಪ್ರಸ್ತುತ ಸಾಲಿನ ಪ್ರವೇಶ ಪ್ರಕಟಣೆಯಲ್ಲಿ Application for P.G. Centre ಹಾಗೂ Application for Main Campus ಎಂಬಂತೆ ಪಕ್ರಟಣೆ ಹೊರಡಿಸಲು ನಿರ್ಣಯಿಸಲಾಯಿತು ಹಾಗೂ ಮುಂಬರುವ ಶೈಕ್ಷಣಿಕ ಸಾಲಿನ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ 2024–25ನೇ ಸಾಲಿನ ಪ್ರವೇಶ ಶುಲ್ಕವನ್ನೇ ಮುಂದುವರೆಸಲು ನಿರ್ಣಯಿಸಿತು. |
| ವಿಷಯ 4 : | ಅತಿಥಿ ಉಪನ್ಯಾಸಕರ ಕುಂದುಕೊರತೆಗಳು ಹಾಗೂ ವೇತನ ಹೆಚ್ಚಳ ಕುರಿತು. |
| ನಿರ್ಣಯ: | ಮಾನ್ಯ ಕುಲಪತಿಗಳು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಡಾ. ಜಿ. ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಉಪ ಸಮಿತಿಯನ್ನು ರಚಿಸಲಾಗಿದ್ದು ಸದರಿ ಉಪ ಸಮಿತಿ ಸಭೆಯಲ್ಲಿ ಈ ಕುರಿತು ಚರ್ಚಿಸಲು ತಿಳಿಸಿದರು. |

ಕುಲಸಚಿವರು　　　　　　　　　　　　　ಕುಲಪತಿಗಳು.

## "ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು"

| ಪ್ರಾಧಿಕಾರಗಳ ವಿಭಾಗ – 44 | |
|---|---|
| ವಿಷಯ ಸಂಖ್ಯೆ: | ಸಿಂ.01(c)/(07/25) |

### -: ಟಿಪ್ಪಣಿ :-

ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ ಘನತೆವೆತ್ತ ಕುಲಾಧಿಪತಿಗಳ/ ಸರ್ಕಾರದ ನಾಮನಿರ್ದೇಶಿತ ಸದಸ್ಯರುಗಳಿಗೆ ಪ್ರಯಾಣ ಭತ್ಯೆ (TA) ದರವನ್ನು ಪರಿಷ್ಕರಿಸಿ ಪಾವತಿಸುವ ಬಗ್ಗೆ.

*********

ಪ್ರಸ್ತುತ ದಿನಮಾನಗಳಲ್ಲಿ ಡೀಸಲ್/ ಪೆಟ್ರೋಲ್ ದರಗಳು ಗಣನೀಯವಾಗಿ ಹೆಚ್ಚಾಗುತ್ತಿರುವುದರಿಂದ ಪ್ರಯಾಣ ದರ ದುಬಾರಿಯಾಗಿದ್ದು, ಪ್ರಸ್ತುತ ಪ್ರತಿ ಕಿಲೋ ಮೀಟರ್‌ಗೆ ನೀಡುತ್ತಿರುವ ರೂ.14/– ಗಳ (Travelling Allowance) ಕಾರ್ ಮೈಲೇಜ್ ದರವನ್ನು ಪರಿಷ್ಕರಿಸಬೇಕೆಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳು ಮಾನ್ಯ ಕುಲಪತಿಗಳಿಗೆ ಮನವಿ ಮಾಡಿರುತ್ತಾರೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:04.07.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಹಾಜರಾಗುವ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಪ್ರಸ್ತುತ ಪ್ರತಿ ಕಿ. ಮೀ. ಗೆ ನೀಡುತ್ತಿರುವ ಕಾರ್ ಮೈಲೇಜ್ (Travelling Allowance) ದರವನ್ನು ರೂ.14/– ಗಳಿಂದ ರೂ.16/– ಗೆ ಹೆಚ್ಚಿಸಲು ಸಭೆಯು ನಿರ್ಣಯಿಸಿ ಅನುಮೋದನೆ ನೀಡಿತು.

ಕುಲಸಚಿವರು          ಕುಲಪತಿಗಳು

| ಅಭಿವೃದ್ಧಿ ವಿಭಾಗ – 45 | |
|---|---|
| ವಿಷಯ ಸಂಖ್ಯೆ: | ಸಿಂ.03(e)/(07/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಹೊಸದಾಗಿ 100 ಟೇಬಲ್ ಹಾಗೂ 500 ಪ್ಲಾಸ್ಟಿಕ್ ಚೇರ್‌ಗಳನ್ನು ಖರೀದಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಮೌಲ್ಯಮಾಪನ ಕಾರ್ಯಗಳಿಗೆ ಹಾಗೂ ಇನ್ನಿತರೆ ಕೆಲಸ ಕಾರ್ಯಗಳಿಗೆ ಅಗತ್ಯವಿರುವ ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವ ಪೀಠೋಪಕರಣಗಳನ್ನು ಒದಗಿಸಲು ಈಗಾಗಲೇ ದರ ಒಪ್ಪಂದ ಮಾಡಿಕೊಂಡ ಸಂಸ್ಥೆ **M/s Nandi Technology, Davanagere** – ಇವರಿಂದ ಖರೀದಿಸಲು ದಿನಾಂಕ:04.07.2025ರಂದು ಜರುಗುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ಪೀಠೋಪಕರಣಗಳ ವಿವರ**

| ಕ್ರ.ಸಂ | ಸಾಮಾಗ್ರಿಗಳು | ಪ್ರಮಾಣ |
|---|---|---|
| 1. | ಆಫೀಸ್ ಟೇಬಲ್ | 100 |
| 2. | ಪ್ಲಾಸ್ಟಿಕ್ ಚೇರ್ | 500 |

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಮೌಲ್ಯಮಾಪನ ಕಾರ್ಯಗಳಿಗೆ ಹಾಗೂ ಇನ್ನಿತರೆ ಕೆಲಸ ಕಾರ್ಯಗಳಿಗೆ ಅಗತ್ಯವಿರುವ ಈ ಮೇಲ್ಕಂಡ ಪಟ್ಟಿಯಲ್ಲಿರುವ ಪೀಠೋಪಕರಣಗಳನ್ನು ಈಗಾಗಲೇ ದರ ಒಪ್ಪಂದ ಮಾಡಿಕೊಂಡ ಸಂಸ್ಥೆ **M/s Nandi Technology, Davanagere** – ಇವರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆ ನೋಡಿಕೊಂಡು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರು (ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಕುಲಪತಿಗಳು